"ಶ್ರೀ ಸೀತಾರಾಘವಪಮಂದಿರಮ್ ಬುಕ್‌ಸೊಸೈಟಿ,"

ಚಿಂತಾಮಣಿ.

---

ವರಾನ್ವೇಷಣೆ—ಹೊಸಪುಸ್ತಕ! ಸರ್ವರಿಗೂ ಉಪಯುಕ್ತವಾದ್ದು!! ಅನೇಕ ಮುಖ್ಯ ಸಂಗತಿಗಳನ್ನೊಳಕೊಂಡಿರತಕ್ಕದ್ದು!!! ಬೆಲೆ 0—3—0

ಸಂಕ್ಷೇಪ ರಾಮಾಯಣಮ್—ಸ್ತೋತ್ರಸಹಿತವಾದುದು! ಭಜನೆಗೆ ಉತ್ತಮವಾದದ್ದು!! ಅಬಾಲವೃದ್ಧರಿಗೂ ಪಠಿಸಲು ಯೋಗ್ಯವಾದ್ದು!!! (ಸಚಿತ್ರ)) 0—0—6

ಗುರುಗಳ ಗುದ್ದಾಟ—ಹಾಸ್ಯರಸಪ್ರಧಾನ! ಓದಲು ಮನೋಹರ!! ಒಳ್ಳೆಯ ನೀತಿಬೋಧಕ!!! (ಓದಲುಕೊತ್ತರೆ ಕೊನೆಗಾಣುವವರೆಗೂ ಮನಸ್ಸುನಿಲ್ಲದು.) (ಅಚ್ಚಿನಲ್ಲಿದೆ.)

ಮನೋಗಣಿತ—ಸೂತ್ರ ಮತ್ತು ಅಭ್ಯಾಸಗಳ ಸಹಿತವಾದದ್ದು! ಪಾಠಶಾಲೆಯ ಬಾಲಕರಿಗೆ ಅತ್ಯಾವಶ್ಯಕ!! (ಬೇಕೇಬೇಕು.) ಇತರರಿಗೂ ಉಪಯೋಗ!!! 0—0—9

ಈ ಪುಸ್ತಕಗಳೆಲ್ಲವೂ ಕೆಳಗಿನ ವಿಳಾಸದಾರರಲ್ಲಿ ದೊರೆಯುತ್ತವೆ! ಒಟ್ಟಾಗಿ ಕೊಳ್ಳುವವರಿಗೆ ಧಾರಾಳವಾದ ಡಿಸ್ಕೌಂಟ್ ಕೊಡಲ್ಪಡುವುದು!! ಅಪೇಕ್ಷೆಯುಳ್ಳವರು ಬರೆದುಕೊಳ್ಳಲಿ!!! (ಅಂಚೆಯವೆಚ್ಚವನ್ನು ಗ್ರಾಹಕರೇ ವಹಿಸಬೇಕು.)

ವಿಳಾಸ:—
ಕೆ. ಟಿ. ಎಸ್. ಶರ್ಮನ್,
(Camp) ಮುರಗಮಲೆ,
ಚಿಂತಾಮಣಿ, (ಕೋಲಾರ)

॥ ಶ್ರೀಃ ॥

ಶ್ರೀ ಗುರುಶಂಕರಭಗವನ್.



# ವಿವಾಹಪ್ರದರ್ಶನಪತ್ರಿಕಾ

ಶೇಷಾದ್ರಿಶಾಸ್ತ್ರಿಗಳ ಮಕ್ಕಳು
ರಾಮಾಶಾಸ್ತ್ರಿಗಳಿಂದ
ವಿರಚಿತವಾಗಿ

ಜಿ. ಟಿ. ಎ. ಪ್ರೆಸ್ಸಿನಲ್ಲಿ ಮುದ್ರಿತವಾಯಿತು.

೧೯೦೮.

Digitized by ROJA MUTHIAH RESEARCH LIBRARY

ಶ್ರೀ.

ಶ್ರೀ ಗುರುಶಂಕರಭಗರ್ವ.

# ವಿವಾಹ ಪ್ರದರ್ಶನ ಪತ್ರಿಕಾ.

ವಂದೇ ಶ್ರೀ ಶಂಕರಾಚಾರ್ಯಗುರುಮಾನಂದವಿಗ್ರಹಂ ।
ಅದ್ವೈತಸ್ಥಾಪಿನಂ ಪ್ರಾಜ್ಞಮಜ್ಞಾನಧ್ವಾಂತಭಾಸ್ಕರಂ ॥

ಈ ಜಗತ್ತಿನ ಸೃಷ್ಟಿ ಸ್ಥಿತಿಲಯಗಳಿಗೆ ಕಾರಣನಾದಂಥಾ ಪರಮೇಶ್ವರನನ್ನು ಪೂಜಿಸಿ, ಧರ್ಮಾರ್ಥಕಾಮ್ಯ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಪಡೆದು ಕೃತಾರ್ಥರಾಗಬೇಕೆಂದು,

(ನಾರದಪರಿವ್ರಾಜಕೋಪನಿಷತ್ತಿನಲ್ಲಿ.—)

ಭೋ ನಾರದವಿಧಿವದಾದಾವನುಪನೀತೋ
ಉಪನಯನಾನಂತರಂ ತತ್ಸತ್ಕುಲಪ್ರಸೂ
ತಃ ಪಿತೃಮಾತೃವಿಧೇಯಃ ಪಿತೃಸಮಿಾಪಾ
ದನ್ಯತ್ರಸತ್ಸಂಪ್ರದಾಯಸ್ಥಂ ಶ್ರದ್ಧಾವಂತಂ
ಸತ್ಕುಲಭವಂ ಶ್ರೋತ್ರಿಯಂ ಶಾಸ್ತ್ರ
ವಾತ್ಸಲ್ಯಂ ಗುಣವಂತಂ ಅಕುಟಿಲಂ ಸದ್ಗು
ರುಮಾಸಾದ್ಯನತ್ವಾಯಥೋಪಯೋಗಶು
ಶ್ರೂಷಾ ಪೂರ್ವಕಂ ಸ್ವಾಭಿಮತಂವಿಜ್ಞಾ
ಪ್ಯದ್ವಾದಶವರ್ಷಸೇವಾಪುರಸ್ಸರಂ ಸರ್ವ
ವಿದ್ಯಾಭ್ಯಾಸಂಕೃತ್ವಾ ತದನುಜ್ಞಯಾ ಸ್ವ

Digitized by ROJA MUTHIAH RESEARCH LIBRARY



ಕುಲಾನುರೂಪಾಭಿಮತಕನ್ಯಾಂ ವಿವಾಹ್ಯ
ಪಂಚವಿಂಶತಿ ಸಂವತ್ಸರಂ ಗುರುಕುಲವಾ
ಸಂಕೃತ್ವಾ ॥

(ಅರ್ಥ) (ಭೋನಾರದ) ಯಲೈ ನಾರದನೆ. (ವಿಧಿವದಾದಾವನುಪನೀತಃ) ವಿಧಿಪ್ರಕಾರ ಉಪನಯನವಾಗದೆಯಿರುವ ಬಾಲಕನು. (ಉಪನಯನಾನಂತರಂ) ಉಪನಯನವಾದನಂತರದಲ್ಲಿ, (ತತ್ಸತ್ಕುಲಪ್ರಸೂತಃ) ಸತ್ಕುಲದಲ್ಲಿ ಹುಟ್ಟಿದಂಥಾ, (ಪಿತೃಮಾತೃವಿಧೇಯಃ) ತಂದೇತಾಯಿಗಳಿಗೆ ವಿಧೇಯನಾದಂಥಾ, ಆ ಬ್ರಹ್ಮಚಾರಿಯು (ಪಿತೃಸಮಿಾಪಾತ್) ತಂದೆಯ ಸಮಿಾಪದೆಶೆಯಿಂದ, (ಅನ್ಯತ್ರ) ಮತ್ತೊಂದು ಕಡೆ, (ಸತ್ಸಂಪ್ರದಾಯಸ್ಥಂ) ಶಿಷ್ಟಾಚಾರಾನುವರ್ತಿಯಾಗಿ, (ಶ್ರದ್ಧಾವಂತಂ) ವೇದವೇದಾಂಗಗಳಲ್ಲೂ ಗುರುವಿನಲ್ಲೂ ಭಕ್ತಿಶ್ರದ್ಧೆಗಳುಳ್ಳಂಥಾ, (ಸತ್ಕುಲಭವಂ) ಒಳ್ಳೇ ಕುಲದಲ್ಲಿ ಹುಟ್ಟಿ, (ಶ್ರೋತ್ರಿಯಂ) ಅಗ್ನಿಷ್ಟೋಮಾದಿಕ್ರತುಗಳನ್ನು ಮಾಡಿರುವ, (ಶಾಸ್ತ್ರ ವಾತ್ಸಲ್ಯಂ) ವೇದಾದಿಶಾಸ್ತ್ರಗಳಲ್ಲಿ ಅಭಿಮಾನವುಳ್ಳ, (ಗುಣವಂತಂ) ಪರೋಪಕಾರನಿರತನಾದ, (ಅ ಕುಟಿಲಂ) ಕಾಮಕ್ರೋಧಾದಿಗಳಿಲ್ಲದ (ಸದ್ಗುರುಂ) ಒಳ್ಳೇ ಗುರುವನ್ನು, (ಆಸಾದ್ಯ) ಹೊಂದಿ, (ನತ್ವಾ) ನಮಸ್ಕಾರವನ್ನು ಮಾಡಿ, (ಯಥೋಪಯೋಗಶುಶ್ರೂಷಾಪೂರ್ವಕಂ) ಉಪಯೋಗವಾದ ಶುಶ್ರೂಷಾಪೂರ್ವಕವಾಗಿ, (ಸ್ವಾಭಿಮತಂ) ತನ್ನ ಅಭಿಪ್ರಾಯವನ್ನು, (ವಿಜ್ಞಾಪ್ಯ) ತಿಳಿಯಪಡಿಸಿ, (ದ್ವಾದಶವರ್ಷಸೇವಾಪುರಸ್ಸರಂ) ೧೨ ವರ್ಷ ಸೇ

ವಾಪೂರ್ವಕವಾಗಿ, (ಸರ್ವವಿದ್ಯಾಭ್ಯಾಸಂಕೃತ್ವಾ) ಸಮಸ್ತ ವೇದಶಾಸ್ತ್ರಗಳನ್ನು ಕಲಿತು, (ತದನುಜ್ಞಯಾ) ಆಚಾರ್ಯರ ಆಜ್ಞೆಯಿಂದ (ಸ್ವಕುಲಾನುರೂಪಾಭಿಮತಕನ್ಯಾಂ) ತನ್ನ ಕುಲಕ್ಕೆ ಒಪ್ಪಿ ಸರಿಯಾಗಿರುವಂಥಾ ಕನ್ನಿಕೆಯನ್ನು, (ವಿವಾಹ್ಯ) ವಿವಾಹವನ್ನು ಮಾಡಿಕೊಂಡು (ಪಂಚವಿಂಶತಿ ಸಂವತ್ಸರಂ ಗುರುಕುಲವಾಸಂಕೃತ್ವಾ) ೨೫ ಸಂವತ್ಸರಗಳು ಗುರುಕುಲವಾಸವನ್ನು ಮಾಡಬೇಕು.

ಎಂದು ಹೇಳುವಲ್ಲಿ, ಉಪನಯನವನ್ನು ಮಾಡಿಕೊಳ್ಳುವ ಬಾಲಕನಿಗೆ,

(ಮನುಃ) ಗರ್ಭಾಷ್ಟಮೇಬ್ದೇಕುರ್ವೀತಬ್ರಾಹ್ಮಣಸ್ಯೋತನಾಯನಂ.

ಗರ್ಭದಿಂದ (೮) ವರ್ಷಗಳಿಗೆ ಬ್ರಾಹ್ಮಣನು ಉಪನಯನವನ್ನು ಮಾಡಬೇಕು. (೧೨) ವರ್ಷಗಳಿಗೆ ಮಾಡಬಹುದೆಂಬದಾಗಿ ಶಾಸ್ತ್ರಗಳಲ್ಲಿ ಹೇಳುತ್ತೆ. ಎಂದು ಹೇಳಿದರೆ ಅನಿವಾರ್ಯವಿಶೇಷಗಳಿಂದ ವಾಪಕ್ಷವಾಗಿ ಮಾಡಬಹುದೇ ಹೊರ್ತು ಅದು ವಿಧಿಯಲ್ಲ ಹ್ಯಾಗಂದರೆ||

(ಮನುಃ) ಬ್ರಹ್ಮವರ್ಚಸಕಾಮಸ್ಯಕಾರ್ಯಂವಿಪ್ರಸ್ಯಪಂಚಮೇ)

ಬ್ರಹ್ಮತೇಜಸ್ಸನ್ನು ಅಪೇಕ್ಷಿಸತಕ್ಕಂಥಾವನು ಗರ್ಭದಿಂದ (೫) ವರ್ಷಗಳಿಗೆ ಉಪನಯನವನ್ನು ಮಾಡಬೇಕು. ಎಂದು ಹೇಳಿಧೆ. ಆದ್ದರಿಂದ ಶ್ರೇಯಸ್ಕಾಮಿಯಾದ ಪುರುಷನು (೫) ಅಥವಾ (೮) ವರ್ಷಗಳಿಗೆ ಉಪನಯನವನ್ನು

ಮಾಡಿದನಂತರ (೧೨) ವರ್ಷಗಳು ಗುರುಗಳ ಸಮೀಪದಲ್ಲಿ ನಿಯಮಾಧ್ಯಯನವನ್ನುಮಾಡಿ ಅನಂತರದಲ್ಲಿ

(ತೈತ್ತರೀಯೊಪನಿಷತ್ತಿನಲ್ಲಿ)

ಆಚಾರ್ಯಾಯ ಪ್ರಿಯಂ ಧನಮಾಹೃತ್ಯಪ್ರಜಾತಂತುಂಮಾವ್ಯವಛೆತ್ಸೀಃ.

(ಅರ್ಥ) (ಆಚಾರ್ಯಾಯ) ವಿದ್ಯಾಗುರುಗಳಿಗೋಸ್ಕರ (ಪ್ರಿಯಂ) ಅವರಿಗೆ ಇಷ್ಟವಾದಂಥಾ (ಧನಂ) ದ್ರವ್ಯವನ್ನು (ಆಹೃತ್ಯ) ತಂದುಕೊಟ್ಟು (ಪ್ರಜಾತಂತುಂ) ಸಂತಾನವನ್ನು (ಮಾವ್ಯವಛೇತ್ಸೀಃ) ಉಂಟಾಗುವಂತೆ ಮಾಡು.

ಎಂಬದಾಗಿ ನಿರ್ಬಂಧವಾಗಿ ವಿಧಿಸಿರುತ್ತೆ. ಶೃತಿವಿಧಿಪ್ರಕಾರಾ ಆ ಬ್ರಹ್ಮಚಾರಿಯು ವಿವಾಹವನ್ನು ಮಾಡಿಕೊಳ್ಳಲೇಬೇಕು. ಆಗ್ಯೆ ಬ್ರಹ್ಮಚಾರಿಗೆ (೧೮) ವರ್ಷಗಳಾಗುವವು. (೧೮) ವರ್ಷಗಳಲ್ಲಿ ಮೂರನೆವಂದುಭಾಗವಾದಂಥಾ (೬) ವರ್ಷಗಳಿರುವ ಕನ್ನಿಕೆಯನ್ನು ವಿವಾಹ ಮಾಡಿಕೊಳ್ಳಬೇಕು, ಅಥವಾ

(ಅಷ್ಟವರ್ಷಾಭವೇತ್ಕನ್ಯಾ)

ಎಂಬ ವಚನಪ್ರಕಾರಾ (೮) ವರ್ಷಗಳಾದರೂ ಆಗಬಹುದು.

ಕನ್ನಿಕೆಗೆ (೮) ವರ್ಷಗಳಿಗೆ ಓದೋಣದರಿಂದ ಉಂಟಾದ ಪ್ರಪಂಚಜ್ಞಾನವಿರುವದಲ್ಲಾ. ಅಂಗಗಳು ಎಳೇದು ಎಂದು ಹೇಳಿದರೆ ಸ್ತ್ರೀಯರುಗಳಿಗೆ ಪ್ರಪಂಚಜ್ಞಾನದಿಂದ ಆಗುವ ಪುರುಷಾರ್ಥವೇನು. ಸಭೆಯಲ್ಲಿ ಕೂತು

Digitized by ROJA MUTHIAH RESEARCH LIBRARY

ಕೊಂಡು ವಾಗ್ವಾದವನ್ನು ಮಾಡಬೇಕೇ, ಪತಿಗೆ ವಿವೇಕವನ್ನು ಕಲಿಸಬೇಕೆ, ಇಲ್ಲದೆ ಗಂಡನಿಗೆ ಸಂಪಾದಿಸಿ ತಂದು ಕೊಡಬೇಕೆ, ಇಲ್ಲದಿದ್ದರೆ ವಂಶಾಭಿವೃದ್ಧಿಯಾಗುವದಿಲ್ಲವೋ, ಪತಿಯ ತಂದೇತಾಯಿಗಳು ಕೃತಾರ್ಥರಾಗುವದಿಲ್ಲವೊ, ಎಂದು ವಿಚಾರಿಸುವಲ್ಲಿ ಸ್ತ್ರೀಯರಿಗೆ ವಿದ್ಯಾಭ್ಯಾಸದಿಂದ ಉಂಟಾದ ಪ್ರಪಂಚಜ್ಞಾನಕ್ಕೂ ಮೇಲೆ ವಿಚಾರಿಸಿದ ವಿಷಯಗಳಿಗೂ ತೇಜಸ್ತಿಮಿರನ್ಯಾಯದಂತೆ ಸಂಬಂಧವೇ ಇಲ್ಲದಿರುವದು. ವಿದ್ಯೆಯಿಂದುಂಟಾದ ಪ್ರಪಂಚಜ್ಞಾನವಿಲ್ಲದಪಕ್ಷದಲ್ಲಿ ಪತಿಭಕ್ತಿಯೂ, ಮಾನಮರ್ಯಾದೆಗಳೂ, ಒಳ್ಳೆ ಶೀಲಸ್ವಭಾವಗಳೂ, ಆಚಾರವಿಚಾರಗಳೂ, ಹ್ಯಾಗೆ ತಿಳಿಯುತ್ತೆ ಎಂದು ವಿಚಾರಿಸುವಲ್ಲಿ, ಮೇಲೆ ಹೇಳಿದ ಜ್ಞಾನದಿಂದ ನಾಸ್ತಿಕತ್ವವುಂಟಾಗಿ ವೇದ ಶಾಸ್ತ್ರಗಳು ವರ್ಣಾಶ್ರಮಧರ್ಮಗಳು ನಾಶವಾಗುವದೇವಿನಹ ಧರ್ಮವಾಗಲಾರದು. ಸ್ತ್ರೀಯರಿಗೆ ಪತಿಭಕ್ತಿಯೇ ಮೊದಲಾದ ಒಳ್ಳೆ ಗುಣಗಳು ಉಂಟಾಗುವಂತೆ ಋಷಿಗಳು ಅನೇಕ ವ್ರತಗಳನ್ನು ಮಾಡಿರುತ್ತಾರೆ. ಆ ವ್ರತಗಳನ್ನು ಭಕ್ತಿಶ್ರದ್ಧೆಗಳಿಂದ ಮಾಡಿದರೆ ಹಿಂದೆ ಹೇಳಿದ ಸುಗುಣಗಳು ಬರುವುದರಲ್ಲಿ ಸಂದೇಹವಿಲ್ಲ. (೮) ವರ್ಷಗಳಿಗೆ ಬಲವಿರುವದಿಲ್ಲ.

ಅಂಗಗಳು ಎಳೇದು. ಆದರಿಂದ (೧೬) ವರ್ಷಗಳಿಗೆ ವಿವಾಹವನ್ನು ಮಾಡಬೇಕೆಂದರೆ ಬಾಲಕೀಯರ ಬಲಾಬಲಗಳನ್ನು ಹ್ಯಾಗೆ ನಿರ್ಧರಿಸುವದಕ್ಕಾಗುವದು. ಮತ್ತು ಇದನ್ನು ಸೃಷ್ಟಿಕರ್ತನಾದ ಪರಮೇಶ್ವರನೇ ಸ್ತ್ರೀಯರುಗಳಿಗೆ ಯೌವ್ವನ ಪ್ರಾಪ್ತವಾದರೇನೇ ರುತುಮತಿಯರಾಗುತ್ತಾರೆ. ಆ ಕಾಲದಲ್ಲಿ ಪತಿಯು ಸಮೀಪದಲ್ಲಿರಬೇಕಾದ್ದರಿಂದ ಋತುವಾಗುವದಕ್ಕಿಂತಲೂ ಪೂರ್ವದಲ್ಲಿಯೇ ವಿವಾಹವನ್ನು ಮಾಡಬೇಕೆಂದು ವಿಧಿಸಿರುತ್ತಾನೆ.



(ಬೃಹಸ್ಪತಿಃ) ಪಿತುರ್ಗೃಹೇತು ಯಾಕ
ನ್ಯಾರಜಃಪಶ್ಯತ್ಯಸಂಸ್ಕೃತಾ ‖ ಭ್ರೂಣಹ
ತ್ಯಾಪಿತುಸ್ತಸ್ಯಾಸ್ಸಾನಾರಿವೃಷಲೀಸ್ಮೃತಾ‖

(ಅರ್ಥ) ತಂದೆಯ ಮನೆಯಲ್ಲಿ ವಿವಾಹವಾಗದೇಯಿರುವ ಕನ್ನಿಕೆಯು ಋತುವಾದದ್ದೇ ಆದರೆ, ತಂದೆಗೆ ಭ್ರೂಣಹತ್ಯಾದೋಷಬರುತ್ತೆ. ಕನ್ನಿಕೆಯು ಶೂದ್ರಳುಯೆಂದು ಹೇಳಿಧಾರೆ. ಆದುದರಿಂದ ಋತುವಾಗುವದಕ್ಕಿಂತಲೂ ಪೂರ್ವದಲ್ಲಿಯೇ ವಿವಾಹವನ್ನು ಮಾಡಬೇಕು.

ಋತುವಾಗತಕ್ಕ ಕಾಲವನ್ನು ನಿರ್ಧರಿಸಲು ಆಗುವದಿಲ್ಲ. ತಂದೆ ತಾಯಿಗಳ ಪೋಷಣೆಯಿದ್ದಂತೆ ಋತುಮತಿಯರಾಗುತ್ತಾರೆ. ಆದ್ದರಿಂದಲೇ (೮) ವರ್ಷಗಳಿಗೆ ವಿವಾಹವನ್ನು ಮಾಡಬೇಕೆಂದು ವಿಧಿಸಿರುತ್ತೆ. (೧೬) ವರ್ಷಗಳಿಗೆ ವಿವಾಹಮಾಡುವಲ್ಲಿ ಈ ಮಧ್ಯೆ ಋತುಮತಿಯರಾಗಿ ಗುರುಗಳ ಮುಂದೆ ನಿಂತು ವಿದ್ಯಾವ್ಯಾಸಂಗವನ್ನುಮಾಡುವಾಗ ಕುಲಸ್ತ್ರೀಯರಿಗೆ ಸ್ವಭಾವವಾದ ನಾಚಿಕೆಯು ಬಂದರೆ ಓ ನಾಚಿಕೆಯೇ ನಾನು ಪ್ರಪಂಚಸ್ಥಾನಕ್ಕೋಸ್ಕರ ಓದುತ್ತಾ ಇಧೇನೆ, ನೀನು ನನ್ನನ್ನು ಪೂರ್ವದ ಸ್ತ್ರೀಯರುಗಳಂತೆ ತಿಳಿದು ಹೆದರಿಸುತ್ತೀಯೆ. ನನಿಗೆ

Digitized by ROJA MUTHIAH RESEARCH LIBRARY

ಪ್ರಪಂಚಜ್ಞಾನವಾಗುತ್ತಾ ಇದೆ ನಾನು ಹೆದರುವಳಲ್ಲ.
ಎಂದು ಗದರಿಸುವಾಗ್ಯೆ ನಾಚಿಕೆಯು ಭಯಪಟ್ಟು ಓಡಿ
ಹೋಗುವದಕ್ಕೂ, ತನಗೆ ಬರತಕ್ಕ ವಿದ್ಯೆಗೂ, ಅಂಗಾಂ
ಗಳು ಬಲಿತುಬರುತ್ತಾ ಇರುವದಕ್ಕೂ ಪ್ರಪಂಚಜ್ಞಾನ
ವುಂಟಾಗಿರುವದಕ್ಕೂ, ಒಂದಕ್ಕೊಂದು ಹಿತೊಪ್ಯತಿಶಯ
ವಾಗಿ ವಿವಾಹವನ್ನು ಮಾಡಿಕೊಳ್ಳುವದಕ್ಕೆ ಹೊರಟರೆ
ತನ್ನ ವಯಸ್ಸಿಗಿಂತಲೂ (೩) ಭಾಗ ಅಧಿಕವಾಗಿರುವ
ಅಂದರೆ (೪೮) ವರ್ಷಗಳುಳ್ಳ ಬ್ರಹ್ಮಚಾರಿಯು ಬೇಕಾ
ಗುವದು. (೧೬) ವರ್ಷಗಳ ಕನ್ನಿಕೆಯು (೪೮) ವರ್ಷ
ಗಳುಳ್ಳ ಬ್ರಹ್ಮಚಾರಿಯನ್ನು ವಿವಾಹವಂ ಮಾಡಿಕೊಳ್ಳು
ವದು. ಆ ಬ್ರಹ್ಮಚಾರಿಯು ನಾನು (೪೮) ವರ್ಷಗಳು.
ಬ್ರಹ್ಮಚರ್ಯಾಶ್ರಮದಲ್ಲಿ ಕ್ರಮವಾಗಿ ಇದ್ದೆನೆಂಬುವದು
ಇವೆರಡರನ್ನು ನಂಬುವದಕ್ಕಾಗುವದಿಲ್ಲ. (೧೬) ವರ್ಷ
ಗಳ ಯುವತೀಗೆ ಕನ್ನಿಕೆಯೆಂಬದಾಗಿಯೂ, (೪೮) ವರ್ಷ
ಗಳ ವೃದ್ಧನಿಗೆ ಬ್ರಹ್ಮಚಾರಿಯೆಂಬದಾಗಿಯೂ ಕಲಿಪು
ರುಷನು ಧರ್ಮವನ್ನು ನಾಶಪಡಿಸುವದಕ್ಕೋಸ್ಕರ
ಹೇಳುತ್ತಾನೆಯೇ ವಿನಹಾ ವೇದಗಳೂ, ಸತ್ಪುರುಷರೂ,
ಆಸ್ತಿಕರೂ ಹೇಳುವದಿಲ್ಲ.

(ಶ್ರೀ ಭಗವದ್ಗೀತೆಯಲ್ಲಿ) ಸದೃಶಂಚೇಷ್ಟಸ್ವತೆಸ್ಯಾಃ
ಪ್ರಕೃತೆಜ್ಞಾನವಾನಪಿ ‖ ಪ್ರಕೃತಿಂಯಾಂತಿಭೂತಾನಿನಿ
ಗ್ರಹಃಕಿಂಕರಿಷ್ಯತಿ‖

ಜ್ಞಾನವಂತನಾದರೂ ಪುರುಷನು ತನ್ನ ಸ್ವಭಾ
ವಕ್ಕೆ ಅನುರೂಪವಾಗಿ ನಡಿಯುತ್ತಾನೆ. ಆದ್ದರಿಂದ ಸಮ



ಸ್ತ ಪ್ರಾಣಿಗಳೂ ಸ್ವಭಾವವನ್ನೆ ಹೊಂದುತ್ತಲಿವೆ.
ಹೀಗಿರುವಲ್ಲಿ ನಿಗ್ರಹವು ಏನುಮಾಡೀತು. ಎಂಬದಾಗಿ ಶ್ರೀ
ಭಗವಂತನಾದ ಶ್ರೀ ಕೃಷ್ಣನು. ಹೇಳಿರುವಲ್ಲಿ, ಈ ಕಲಿ
ಯುಗದಲ್ಲಿ ವೈರಾಗ್ಯತಪಸ್ಸುಗಳನ್ನು ನಿರ್ಮೂಲಮಾಡಿ
ಇಂದ್ರಿಯನಿಗ್ರಹವನ್ನು ಮಾಡಿರುತ್ತೇವೆ. ಧರ್ಮವನ್ನು
ಬಲ್ಲೆವು ಎಂಬದಾಗಿ ಹೇಳಿದರೆ, ಮೂಢನು ನಾನು ಬೃಹ
ಸ್ಪತ್ಯಾಚಾರ್ಯರಿಗೆ ಸಮಾನನು ಎಂದು ಹೇಳಿದಂತಾಗು
ವದು. ಭರದ್ವಾಜ ಋಷಿಗಳೇ ಮೊದಲಾದವರು (೨೦೦)
(೩೦೦) ವರ್ಷಗಳು ಬ್ರಹ್ಮನಿಂದ ಆಯುಸ್ಸನ್ನು ಪಡೆದು
ಧರ್ಮಗಳನ್ನು ತಿಳಿಯಬೇಕೆಂದು ವೇದಗಳನ್ನು ಓದಿದಾ
ಗ್ಯೂ ಪೂರ್ತಿಯಾಗಲಿಲ್ಲ. ಇಂಥಾದ್ದರಲ್ಲಿ ಸಂಧ್ಯಾವಂಧ
ನೆಯ ಸ್ವರೂಪವನ್ನೆ, ಕಾಣದೆ ಧರ್ಮಶಾಸ್ತ್ರಗಳಲ್ಲಿ
ಹೇಳಿರುವ ಬ್ರಹ್ಮಚರ್ಯ, ಗೃಹಸ್ತ, ವಾನಪ್ರಸ್ಥ, ಸನ್ಯಾ
ಸವೆಂಬ ಆಶ್ರಮಚತುಷ್ಟಯಗಳನ್ನು ಹೊಂದಿ, ಆಶ್ರಮ
ಧರ್ಮಗಳಾದ ಶ್ರೌತ, ಸ್ಮಾರ್ತ, ನಿತ್ಯಕರ್ಮಂಗಳನ್ನೆಲ್ಲಾ
ಆಚರಿಸಿದಂತೆಯೂ, ಋತುವಾದ ಸ್ತ್ರೀಯರಿಗೂ (೧೬)
ವರ್ಷಗಳಿಗೆ ವಿವಾಹವೂ ಮಾತ್ರ ಬಿಟ್ಟಿರುವಂತೆ ತಿಳಿದು,
ಅದನ್ನು ಬಿಟ್ಟಿರುವದು ಧರ್ಮವಲ್ಲ. ಧರ್ಮದ್ರೋಹವಾ
ಗುತ್ತೆ. ಆದಕಾರಣ ಋತುವಾದನಂತರದಲ್ಲೂ ವಿವಾಹ
ವನ್ನು ಮಾಡಬೇಕೆಂದರೆ, ಧರ್ಮಶಾಸ್ತ್ರ ಪುರಾಣಗಳನ್ನು
ಮಾಡಿರುವ ಮನುವ್ಯಾಸಾದಿಗಳೇ—

(ಮನುಃ) ಶೃತಿ ಸ್ಮೃತಿವಿರೋಧೇತು ಶ್ರುತಿರೇವಗ
ರೀಯಸೀ.

Digitized by ROJA MUTHIAH RESEARCH LIBRARY

(ಅರ್ಥ) ಶ್ರುತಿಸ್ಮೃತಿಗಳಿಗೆ ವಿರೋಧವಾದರೆ ಧರ್ಮ ಶಾಸ್ತ್ರವಚನಗಳನ್ನು ತಿರಸ್ಕರಿಸಿ, ವೇದವಚನದಂತೆ ಯೇ ನಡಿಯಬೇಕು, ಮತ್ತು

(ಮನುಃ) ವೇದೋಖಿಲೊ ಧರ್ಮಮೂಲಂ.

ಸಮಸ್ತ ಧರ್ಮಗಳಿಗೂ ವೇದಗಳೇ ಮೂಲವೆಂಬ ದಾಗಿಯೂ ಹೇಳಿರುತ್ತಾರೆ. ಆದಕಾರಣ ಧರ್ಮಶಾ ಸ್ತ್ರಕರ್ತರಾದ, ಮನುವ್ಯಾಸಾದಿಮಹಋಷಿಗಳಿಗೇನೇ ಧರ್ಮವನ್ನು ಹೇಳುವ, ವೇದವಾಕ್ಯಗಳ, ಮುಂದೆ ಧರ್ಮ ಶಾಸ್ತ್ರಪುರಾಣವಾಕ್ಯಗಳು, ಘೂಳೀಮಾತುಗಳಿಗೆ ಸ ಮಾನವಾಗುವದೂ, ಮತ್ತು ಮಗನು ತಂದೆಗೆ ನಾಮಕರ ಣವನ್ನುಮಾಡಿ, ವಿವೇಕಜ್ಞಾನಕ್ಕೋಸ್ಕರ ಅಕ್ಷರಾಭ್ಯಾ ಸ ಮಾಡಿಸಿದಂತಾಗಿ, ವೇದಶಾಸ್ತ್ರಗಳನ್ನು ವೃದ್ಧಾಚಾರ ವನ್ನು ಬ್ರಾಹ್ಮಣಧರ್ಮವನ್ನು ನಾಶಪಡಿಸಿ, ಜಾತಿಸಂಕ ರಕ್ಕೆ ಕಾರಣವಾಗುವದು. ಪ್ರಪಂಚದಲ್ಲಿ ದೇವರು ಇಲ್ಲ ವಾಗುವನು. ನಾಸ್ತಿಕವು ಪ್ರಬಲವಾಗಿ ಧರ್ಮವು ನಾಶ ವಾಗುವದು. ಯಾವಾಗ ಧರ್ಮವು ನಾಶವಾಯಿತೋ ಆವಾಗಲೇ ಮಾರಿಕೋಪದ್ರವಗಳು ಕ್ಷಾಮಗಳು ಪ್ರಾಪ್ತ ವಾಗುವದು. ಸದ್ಬ್ರಾಹ್ಮಣ ಸದ್ವಂಶಗಳು ಇಲ್ಲದೆಹೋ ಗುವದು. ಇಂಥಾದ್ದರಲ್ಲಿ ವೇದಧರ್ಮಶಾಸ್ತ್ರಗಳ ಸ್ವರೂಪವನ್ನೆ ಕಾಣದ ಯಾರೊ ಒಬ್ಬರು (೧೬) ವರ್ಷ ಗಳಿಗೆ ಸ್ತ್ರೀಯರಿಗೆ ವಿವಾಹವನ್ನು ಮಾಡಬಹುದೆಂದು ಯಾವದೊ ಒಂದು ಧರ್ಮಶಾಸ್ತ್ರದಲ್ಲಿರುವ ಯಾವ ದೊ ಒಂದು ಮಾತನ್ನು ಯಾರಲ್ಲೊ ರಾಮ, ರಾಮ. ಎಂಬ



ಮಾತನ್ನು ಮಾತ್ರ ಕಲಿತಿರುವ ಗಿಣಿಯಂತೆ ಕಲಿತು ಅದೆ ಧರ್ಮಶಾಸ್ತ್ರದಲ್ಲಿ ಹೇಳಿರುವ ಪೂರ್ವಾಪರ ವಚನ ಗಳನ್ನು ಬಿಟ್ಟು, ಶಾಸ್ತ್ರವನ್ನು ತಿಳಿಯದವರ ಮುಂದೆ ಸ್ತ್ರೀಯರುಗಳಿಗೆ (೧೬) ವರ್ಷಗಳಿಗೆ ವಿವಾಹವನ್ನು ಮಾಡಿ—ಧರ್ಮಶಾಸ್ತ್ರಗಳಲ್ಲಿ ಹೇಳಿರುತ್ತೆ. ಇದರಿಂದ ಎಷ್ಟೋ ಪ್ರಯೋಜನವುಂಟು. ಹಿಂದೆ ನಮ್ಮ ಪೂ ರ್ವೀಕರು ಸಾವಿತ್ರಿ, ಮೈತ್ರೇಯಿ, ಮೊದಲಾದವರಿಗೆ ಸ್ವತಂತ್ರವನ್ನು ಕೊಟ್ಟಿದ್ದರೂ ವಿದ್ಯೆಯನ್ನು ಕಲಿಸಿ ದ್ದರು. ಋತುವಾದನಂತರ ವಿವಾಹವನ್ನು ಮಾಡುತ್ತಿ ದ್ದರು. ಎಂಬದಾಗಿ ವೇದವಿರುದ್ಧವಾಗಿ ಹೇಳುತ್ತಾರೆ. ಆದರೆ ಸಾವಿತ್ರಿಯು ತನ್ನ ಪತಿಯ ಪ್ರಾಣಗಳನ್ನು ತೆಗೆ ದುಕೊಂಡುಹೋಗುತ್ತಿದ್ದ ಯಮನ ಜೊತೆಯಲ್ಲಿಯೇ ಯಮಲೋಕಕ್ಕೆ ಹೋಗಿ ಆ ಯಮನಿಂದ ತನ್ನ ಪತಿ ಯನ್ನು ಬದುಕಿಸಿಕೊಂಡು ಇಷ್ಟಾರ್ಥಗಳನ್ನು ಕೊಡುವ ಅನೇಕ ವರಗಳನ್ನು ಪಡೆದು ಬಂದು ಪತಿಯೊಡನೆ ಸುಖ ವಾಗಿದ್ದಳು. ಈ ಕಲಿಯುಗದಲ್ಲಿ ಪತಿಯು ವಿಯೋಗ ವಾದರೆ ಸಾವಿತ್ರಿಯಂತೆ ಪತಿಯನ್ನು ಬದಕಿಸುವ ಪ್ರಯ ತ್ನವನ್ನು ಮಾಡದೆ ಪುನರ್ವಿವಾಹವನ್ನು ಯಾವ ಧರ್ಮ ಶಾಸ್ತ್ರಗಳಲ್ಲಿ ಹೇಳಿಧೆಯೆಂದು ಎರಡನೆ ಪತಿಯನ್ನು ಹು ಡುಕುವಕಾಲದಲ್ಲಿ ಇಂಥಾ ಸ್ತ್ರೀಯರಿಗೆ ಸ್ವಾತಂತ್ರ್ಯದಿಂ ದಾಗುವ ಸುಖವೋ ದುಃಖವೋ ಎರಡನೇ ಗಂಡನಿಗೇನೆ ತಿಳಿಯಬೇಕು. ಮತ್ತು ಸ್ತ್ರೀಯರಿಗೆ ಸ್ವಾತಂತ್ರ್ಯವಿ ಲ್ಲವೆಂದು ಧರ್ಮಶಾಸ್ತ್ರಗಳಲ್ಲಿ ಹೇಳಿರುತ್ತೆ. ಆದುದರಿಂದ,

Digitized by ROJA MUTHIAH RESEARCH LIBRARY

( ತೈತ್ತರೀಯೋಪನಿಷತ್ತಿನಲ್ಲಿ ) ಯಾನ್ಯನವದ್ಯಾನಿಕರ್ಮಾಣಿ ತಾನಿಸೇವಿತವ್ಯಾನಿ ನೋಯಿತರಾಣಿ ಶಿಷ್ಟಾಚಾರಕರ್ಮಗಳನ್ನು ಮಾಡಬೇಕು. ನಿಂದನೀಯವಾದ ಕರ್ಮಗಳನ್ನು ಮಾಡಕೂಡದು. ಸ್ತ್ರೀಯರಿಗೆ (೧೬) ವರ್ಷಗಳಿಗೆ ವಿವಾಹವೂ ಮತ್ತು ಋತುವಾದನಂತರದಲ್ಲಿ ವಿವಾಹವೂ ಸ್ವಾತಂತ್ರ್ಯವೂ ಹೇಳುವ ವೇದವಿರುದ್ಧವಾದ ಧರ್ಮಶಾಸ್ತ್ರಗಳ ಮಾತನ್ನು ತಿರಸ್ಕರಿಸಿ ನಾರದಪರಿವ್ರಾಜಕೋಪನಿಷತ್ ತೈತ್ತರೀಯೋಪನಿಷತ್ತು ಮೊದಲಾದ ವೇದಗಳು ಹೇಳುವ ವಿಧಿಗಳಂತೆ ಪುರುಷನಿಗೆ ಗರ್ಭದಿಂದ (೮) ವರ್ಷಗಳಿಗೆ ಉಪನಯನವೂ (೧೯) ವರ್ಷಗಳಿಗೆ (೮) ವರ್ಷಗಳ ಕನ್ನಿಕೆಯನ್ನು ವಿವಾಹ ಮಾಡಿ ಬ್ರಾಹ್ಮಣಧರ್ಮದಲ್ಲಿ ಇದ್ದು ಧರ್ಮಾರ್ಥ ಕಾಮ ಮೋಕ್ಷಗಳನ್ನು ಪಡೆದು ಕೃತಾರ್ಥರಾಗಬೇಕೆಂಬುವದೇ ವೇದಗಳಅಭಿಪ್ರಾಯವು.

ಶೇಷಾದ್ರಿಶಾಸ್ತ್ರಗಳ ಮಕ್ಕಳು

ರಾಮಾಶಾಸ್ತ್ರಿ.

ಶ್ರೀಃ

—

ಶ್ರೀಯೈನಮಃ

## ಕಳೆದ ವರ್ಷದ ಸಮಾಲೋಚನೆ.

ಹೊಸವರ್ಷವು ಪ್ರಾರಂಭವಾಗುತ್ತಲೇ ಕಳೆದು ಹೋದ ವರ್ಷದಲ್ಲಿ ನಡೆದ ಕಾರ್ಯಕಲಾಪವನ್ನು ಕುರಿತು ಸಿಂಹಾವಲೋಕನನ್ಯಾಯವಾಗಿ ಸಮಾಲೋಚನೆ ಮಾಡುವುದು ವರ್ತಮಾನಪತ್ರಿಕೆಗಳ ಸಂಪಾದಕರಿಗೆ ಆವಶ್ಯಕವಾದ ಪದ್ಧತಿ. ನಮ್ಮ "ಕ್ರಂದನವಾದಿನ್" ಪತ್ರವು ವರ್ತಮಾನಪತ್ರಿಕೆಯಲ್ಲ. ಅದುಕಾರಣ ವರ್ಷದ ಸಮಾಲೋಚನೆ ಮಾಡಬೇಕೆಂದು ಬಲವಂತವೇನೂ ಇಲ್ಲ. ಆದರೆ ಯಾವುದನ್ನು ಮಾಡುವುದಕ್ಕೆ ತಾನೇ ನಮಗೆ ಆಶೆಯಿರುವುದಿಲ್ಲ ? ಅನೇಕರು ರಾಜರಲ್ಲದಿದ್ದರೂ ರಾಜನ ಹಾಗೆ ದಿಟ್ಟವಾಗಿಯೂ ಹಸನಾಗಿಯೂ ನಡೆಯುವುದಿಲ್ಲವೆ? ಕಪ್ಪಾಗಿರುವ ಅನೇಕ ಹಿಂದುಗಳು ಸಾಹೇಬರಾಗಬೇಕೆಂಬ ಆಶೆಯಿಂದ ಸುಖವಾಗಿ ಸೇರಿಕೆಯಿಲ್ಲದೆ ಬಿಪ್ಪದಿರುವ ಕೋಟುಗಳಲ್ಲಿಯೂ, ಪೆನ್‌ಟಲೂನುಗಳಲ್ಲಿಯೂ, ಬೂಟುಗಳಲ್ಲಿಯೂ, ಮೈ ಕೈಕಾಲುಗಳನ್ನು ಬಲವಂತವಾಗಿ ಸಿಲುಕಿಹಾಕಿಕೊಳ್ಳುವುದಿಲ್ಲವೆ? ಹಾಗೆಯೇ "ಕ್ರಂದನ ವಾದಿನ್" ಅಲ್ಪವಾದ, ಬಡವನೊಬ್ಬನನ್ನು ಕಾಪಾಡಬಹುದಾದ ಮಾಸಪತ್ರಿಕೆಯಾದರೂ, ದೋರ್ದಂಡ ಪ್ರಚಂಡ ಪ್ರತಾಪಶಾಲಿಯಾದ ವರ್ತಮಾನನ

Digitized by ROJA MUTHIAH RESEARCH LIBRARY

ತ್ರಿಕೆಯ ಅಧಿಕಾರವನ್ನು ವಹಿಸಿಕೊಳ್ಳಲು ಆಶೆಯುಳ್ಳದುದಾಗಿರಕೂಡದೇಕೆ? ಗಿಡ್ಡನಾಗಿದ್ದ ಮಾತ್ರಕ್ಕೆ ಎತ್ತರವಾಗಿ ಚಿಂತಿಸಿ ವಿಚಾರಮಾಡಬಾರದೆ? ಆದುದರಿಂದ ಪ್ರಕೃತ ನಾವು ಕೈಗೊಂಡ ಕಾರ್ಯವನ್ನು ನಿರ್ವಹಿಸಲು ಪ್ರವೃತ್ತರಾಗುವೆವು.

ಆದರೆ ದೈವದುರ್ವಿಪಾಕದಿಂದ ಮನುಷ್ಯ ಜಾತಿಯು ಬಯಸುವ ಆಶೆಗೆ ಏನಾದರೂ ಒಂದು ವಿಘ್ನವು ಅಡ್ಡಾಗುತ್ತಲೇ ಇರುವುದು. ಹೊಸವರ್ಷವು ಪ್ರಾರಂಭವಾದುದು ಜನವರಿ ತಿಂಗಳಲ್ಲಿ. ನಾವು ಬರೆಯುವುದಕ್ಕೆ ಕುಳಿತಿರುವುದು ನವಂಬರ ತಿಂಗಳ "ಕ್ರಂದನವಾದಿನ್". ಇದೇನು ಅನ್ಯಾಯ! ರಾಮನನ್ನು ಬಿಟ್ಟು ರಾಮಾಯಣವಾಗಿದೆ! ಆದರೆ ನಮಗೊಂದು ಅನುಕೂಲವುಂಟು. ಅದು ನಮ್ಮ ಅದೃಷ್ಟವಿಶೇಷವೆಂದು ತಿಳಿಯಬೇಕು. "ಕ್ರಂದನವಾದಿನ್" ಮಾಸಪತ್ರಿಕೆಯು ಪ್ರಕಾಶಪಡಿಸಲ್ಪಡುವುದಕ್ಕೆ ಕಾಲನಿರ್ಣಯವಿಲ್ಲ. ಅದು ಸ್ವೇಚ್ಛಾಚಾರಿ. ಯಾವಾಗಬೇಕಾದರೂ ಹೊರಡುತ್ತಿರಬಹುದು. ಅತಏವ ನಮ್ಮ ಮನದ ಬಯಕೆಯು ಮನದಲ್ಲೇ ಲೀನಗೊಳಿಸದೆ, ವಿಷಾದ ಮುಂತಾದ ಅನುಪ್ರಾಸದ ಪೀಠಿಕೆಯನ್ನು ಬರೆಯುವ ರಗಳೆಯನ್ನು ಹಚ್ಚಿಕೊಳ್ಳದೆ, ಈ ನವಂಬರ ತಿಂಗಳಲ್ಲೇ ಹೋದವರ್ಷದ (೧೯೩೪) ಸಮಾಲೋಚನೆಯನ್ನು ಮಾಡುವೆವು. ಅತಏವ, ಗತವರ್ಷವೆ! ಸಾವಧಾನವಾಗು! ನಿನ್ನನ್ನು ಕುರಿತು ಸಮಾಲೋಚನೆ ಮಾಡುವೆವು.

Digitized by ROJA MUTHIAH RESEARCH LIBRARY



ಗತವರ್ಷದಲ್ಲಿ ನಿರ್ವಹಿಸಲ್ಪಟ್ಟ ರಾಜಕಾರ್ಯಪರಂಪರೆಯನ್ನು ಶ್ರಮಪಟ್ಟು ಸಂಧಾನ ಮಾಡಿದುದರಲ್ಲಿ ತಿಳಿಯಬಂದಿರುವುದೇನೆಂದರೆ:— ಹೋದವರ್ಷಕ್ಕೆ ೩೬೫ ದಿನಗಳಿದ್ದವು. ಒಂದು ದಿನವೂ ಕಡಮೆಯಾಗಿರಲಿಲ್ಲ. ಪ್ರತಿದಿನಕ್ಕೂ ೨೪ ಘಂಟೆಗಳು. ಪ್ರತಿಘಂಟೆಗೂ ೬೦ ಮಿನಿಟುಗಳು. ಯಾವುದರಲ್ಲಿಯೂ ನಮಗೆ ಕಡಮೆ ಬರಲಿಲ್ಲ! ಸರಕಾರದವರು ಇದರಲ್ಲಿ ಕೈಹಾಕಲಿಲ್ಲ. ಅದರಿಂದ ಅವರ ವಿವೇಕವು ವ್ಯಕ್ತಪಡುತ್ತದೆ. ಆದರೆ ಈ ಸಂವತ್ಸರದಲ್ಲಿ ಕೆಲವು ದಿನಗಳನ್ನು ಕಡಮೆ ಮಾಡಿದ್ದರೆ ಒಳ್ಳೆಯದಾಗುತ್ತಿದ್ದಿತೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ನಾವು ಅಂತಹ ಅಭಿಪ್ರಾಯವನ್ನು ಅನುಮೋದಿಸಲಾರೆವು. ದಿನಗಳನ್ನು ಕಡಿಮೆಮಾಡಿಬಿಟ್ಟರೆ ನೌಕರಮಾನೇರಿಗೆ ವೇತನಲಾಭವೂ, ವರ್ತಮಾನಪತ್ರಿಕೆಯ ಲೇಖಕರಿಗೆ ಶ್ರಮಲಾಘವವೂ ಉಂಟಾಗುತ್ತಿದ್ದಿತೇ ಹೊರತು ಸಾಧಾರಣ ಜನಸಾಮಾನ್ಯಕ್ಕೆ ಲಾಭವೇನೂ ಉಂಟಾಗುತ್ತಿರಲಿಲ್ಲ. (ನಮ್ಮ "ಕ್ರಂದನವಾದಿನ್" ಮಾಸಪತ್ರಿಕೆಯ ಹನ್ನೆರಡು ಸಂಚಿಕೆಗಳಿಗೆ ಕಡಮೆಯಾಗಿ ನಮ್ಮ ಚಂದಾದಾರರಲ್ಲಾರೂ ತೆಗೆದುಕೊಳ್ಳಲೊಪ್ಪುತ್ತಿರಲಿಲ್ಲವೆಂದು ತೋರುತ್ತದೆ. ಹನ್ನೆರಡು ತಿಂಗಳಲ್ಲಿಯೂ "ಕ್ರಂದನವಾದಿನ್" ಹೊರಡುತ್ತಲೇ ಇರಬೇಕು.) ಆದರೆ ಬೇಸಿಗೆಯ ಕಾಲವನ್ನು ಸಂಪೂರ್ಣವಾಗಿ ತೆಗೆದು ಹಾಕಿದ್ದರೆ ಬಹಳ ಅನುಕೂಲವಾಗಿದ್ದಿತು. ಈಗ ಹನ್ನೆರಡು ತಿಂಗಳುಗಳೂ

ಶೀತಕಾಲವಾಗಿರಬೇಕೆಂದು ಬಂದು "ರೆಗ್ಯುಲೇಶನ್ನನ್ನು" (ಕಾನೂನನ್ನು) ಹೊರಡಿಸುವ ವಿಚಾರದಲ್ಲಿ ಸರಕಾರದವರು ದೃಷ್ಟಿಯನ್ನು ಕೊಟ್ಟರೆ ಜನಸಾಮಾನ್ಯಕ್ಕೆ ಕ್ಷೇಮವಾಗುವುದೆಂದು ಸೂಚಿಸುವೆವು.

ಈ ವರ್ಷದ ಕಡೆಯಭಾಗದಲ್ಲಿ, ದೇಶದಲ್ಲಿ ಪ್ರತಿಯೊಬ್ಬ ಮನುಷ್ಯನ ಪರಮಾಯುಸ್ಸಿನಲ್ಲಿ ಬಂದೊಂದು ವರ್ಷವು ಕಳವಾಗಿಹೋಯಿತೆಂದು ಕೇಳಿ ಬಹಳ ದುಃಖಿತರಾದೆವು. ಆದರೆ ಅದನ್ನು ನಿಜವೆಂದು ನಂಬಲಾರೆವು. ಏತಕ್ಕೆಂದರೆ, ನಮ್ಮ ಪ್ರತ್ಯಕ್ಷಾನುಭವದಲ್ಲಿ ನಮಗೆ ೩೪ ವರ್ಷವಿದ್ದುದು ೩೫ ವರ್ಷಕ್ಕೆ ಬಂದಿದೆ. ಪರಮಾಯುಸ್ಸಿನಲ್ಲೇನಾದರೂ ಕಳವಾಗಿದ್ದರೆ ನಮಗೆ ಬಂದುವರ್ಷವು ಹೆಚ್ಚಾದ ಬಗೆ ಹೇಗೆ ? ನಿಂದಿಸುವ ಸ್ವಭಾವವುಳ್ಳ ಪತ್ರಿಕೆಗಳ ಸಂಪಾದಕರು ಯಾವಾಗಲೂ ಈ ಪ್ರಕಾರಸುಳ್ಳು ಪ್ರವಾದವನ್ನು ಪ್ರಚಾರಪಡಿಸುತ್ತಿರುವರು.

ಈ ವರ್ಷವು ಸುಭಿಕ್ಷವಾಗಿದ್ದಿತು. ಅದಕ್ಕೆ ವಿಶೇಷ ದೃಷ್ಟಾಂತವೇನೆಂದರೆ :—ಈವರ್ಷದಲ್ಲಿ ಅನೇಕರಿಗೆ ಸಂತಾನಗಳು ಹುಟ್ಟಿದವು. "ಟೆಸ್ಟಿಮೆಂಟಲ್." (Statistical) ಇಲಾಖೆಯಲ್ಲಿ ಸುದಕ್ಷರಾದ ನೌಕರಮಾನೇರು ವಿಶೇಷ ಶ್ರಮಪಟ್ಟು, ಕೆಲವರಿಗೆ ಗಂಡುಮಕ್ಕಳಾದವೆಂದೂ, ಕೆಲವರಿಗೆ ಹೆಣ್ಣುಮಕ್ಕಳು ಹುಟ್ಟಿದವೆಂದೂ, ಮತ್ತೆ ಕೆಲವರಿಗೆ ಗರ್ಭಸ್ರಾವವಾಯಿತೆಂದೂ ನಿರ್ಧಾರಮಾಡಿದ್ದಾರೆ. ಅವರು ಮಾಡಿರುವ ರಿಪೋರ್ಟುಗಳು ಬಹಳ ಉಪಾದೇಯವಾಗಿರುವುವು. ಆದರೆ ಈ ವರ್ಷದಲ್ಲಿ ಕೆಲವು ಮನು-



ಷ್ಯರು (ಹೆಚ್ಚು ಜನಗಳಲ್ಲ) ರೋಗಾದಿಗಳಿಂದ ಸತ್ತುಹೋದರೆಂದು ಕೇಳಲು ವಿಷಾದಿಸುತ್ತೇವೆ. ದೇಶೀಯ ದೊಡ್ಡಮನುಷ್ಯರೆಲ್ಲರೂ ಸೇರಿ ಬಂದು ವಿರಾಟಸಭೆಯನ್ನು ಮಾಡಿ, ಈ ಪುಣ್ಯಭೂಮಿಯಾದ ಭಾರತಭೂಮಿಯಲ್ಲಿ ಯಾರೂ ಸಾಯಕೂಡದೆಂದು ಠರಾವು (Resolution) ಮಾಡಿ, ಅದನ್ನು ಜಾರಿಗೆ ತರಿಸಬೇಕೆಂದು ಪಾರ್ಲಿಮೆಂಟಿಗೆ ಅರ್ಜಿಯನ್ನು ಕಳುಹಿಸಿದ್ದಾರೆಂದು ಕೇಳಿದೆವು. ಮತ್ತು ಯಾರಾದರೂ ಆವಶ್ಯಕವಾಗಿ ಸಾಯಬೇಕೆಂದು ಇಷ್ಟವುಳ್ಳವರು ಮೊದಲು ಪೋಲೀಸಿಗೆ ತಿಳಿಸಿ ಅಪ್ಪಣೆಯನ್ನು ಪಡೆದು ಸಾಯಬಹುದೆಂದು ಅರ್ಜಿಯಲ್ಲಿ ಕೇಳಿಕೊಂಡಿದ್ಧಾರೆಂದೂ ವರ್ತಮಾನವನ್ನು ಕೇಳಿದೆವು.

ಈ ವರ್ಷ ನಗದಿ (Financial) ಇಲಾಖೆಯ ವ್ಯಾಪಾರವು ಅತಿ ವಿಚಿತ್ರತರವಾಗಿದೆ. ಸರಕಾರದ ಹಣವು ವಸೂಲಾಗಿರುವುದಲ್ಲದೆ ವೆಚ್ಚವೂ ಆಗಿದೆಯೆಂದು ಕೇಳಿದೆವು. ಇದು ಆಶ್ಚರ್ಯಕರವಾದುದು ಅಹುದೋ ಅಲ್ಲವೋ ಹಾಗಿರಲಿ, ಹೆಚ್ಚು ಆಶ್ಚರ್ಯಕರವಾದುದೇನೆಂದರೆ, ಸರಕಾರದ ಹಣವು ಖಜಾನೆಯಲ್ಲಿ ಸ್ವಲ್ಪ ಮಟ್ಟಿಗೆ ಉಳಿದುಹೋಗಿದೆ ; ಕೆಲವು ವಸೂಲಾಗಿದೆ. ವಸೂಲಾಗದಿರುವುದೂ ವಸೂಲಾದುದೂ ಸೇರಿಹೋಗಿದೆ. ಮುಂದಿನ ವರ್ಷದಲ್ಲಿ (1876) ಹೊಸ ತೆರಿಗೆ ಏರ್ಪಡುವುದೋ ಅಥವಾ ಇಲ್ಲವೋ ಈಗ ಹೇಳುವುದಕ್ಕಾಗುವುದಿಲ್ಲ. (1877) ನೇ ವರ್ಷದ ಏಪ್ರಲ್‌ತಿಂಗಳಲ್ಲಿ ತಿಳಿಸುವೆವೆಂದು ನಂಬಿದ್ಧೇವೆ.

MUTHIAH RESEARCH LIBRARY

ಈ ವರ್ಷದಲ್ಲಿ ಜುಡಿಷಿಯಲ್ ಇಲಾಖೆಯ ಕೆಲಸ
ಕಾರ್ಯಗಳು ತೃಪ್ತಿಕರವಾಗಿದ್ದಿತೆಂದು ಹೇಳುವುದಕ್ಕಾ
ಗುವುದಿಲ್ಲ. ಫಿರ್ಯಾದಿಗಳ ವಿಚಾರಣೆಯಾಗಿರುವುದು
ಸರಿಯೆ ; ಅಥವಾ ಆಗುತ್ತಿರುವುದು ಅಥವಾ ಆಗುವ
ಪ್ರಯತ್ನದಲ್ಲಿರುವುದು. ಆದರೆ ಫಿರ್ಯಾದು ಮಾಡದಿರು
ವವರ ವಿಚಾರಣೆಯೇನೇನೂ ಆಗಿಲ್ಲ. ಅದಕ್ಕೆ ಕಾರಣ
ವನ್ನು ಊಹಿಸಲಾರೆವು. ಎಲ್ಲೆಲ್ಲಿ ವಿಚಾರಾಲಯಗಳು
(ಕೋರ್ಟುಗಳು) ಇರುವುವೋ ಅಂತಹ ಸ್ಥಳಗಳಲೆಲ್ಲಾ
ಫಿರ್ಯಾದು ಮಾಡಲಿ, ಮಾಡದಿರಲಿ, ವಿಚಾರಣೆಯಾಗು
ತ್ತಿರುವುದು ಅತ್ಯಂತಾವಶ್ಯಕ. ಬಿಸಿಲು ಬೇಕಾಗಲಿ, ಬೇಡ
ದಿರಲಿ, ಸೂರ್ಯದೇವನು ಸರ್ವತ್ರ ಬಿಸಿಲುಮಾಡುವನು.
ಮಳೆಯು ಬೇಕಾಗಲಿ, ಬೇಡದಿರಲಿ, ಮೇಘವು ಹೊಲ
ಹೊಲಗಳಲ್ಲಿಯೂ ಮಳೆಯನ್ನು ಕರೆಯುತಿರುವುದು.
ವಿಚಾರಣೆಯು ಬೇಕಾಗಲಿ, ಬೇಡದಿರಲಿ, ವಿಚಾರಣೆಕ
ರ್ತರು ಮನೆಮನೆಯನ್ನುಹೊಕ್ಕು ವಿಚಾರಣೆಮಾಡಬೇ
ಕು.— ಮಾಡುತ್ತಾರೆಂದೂ ತಿಳಿಯಬರುತ್ತದೆ. ಕೆಲವ
ರು ಹೇಳುವುದರಲ್ಲಿ, ವಿಚಾರಕರ್ತರು ವಿಚಾರಾರ್ಥವಾಗಿ
ಮನೆಮನೆಯನ್ನು ಪ್ರವೇಶಿಸಿದಾಗ ಮನೆಯವರ ಸಮ್ಮಾ
ರ್ಜನಿಯು ಅಕಸ್ಮಾತ್ತಾಗಿ ವಿಘ್ನವುಂಟುಮಾಡುವುದೆಂದು
ತಿಳಿಯಬರುತ್ತದೆ. ಆದರೆ ನಾವು ಕೇಳಿರುವುದರಲ್ಲಿ,
ಕೆಳಗಣ ಶ್ರೇಣಿಯ ನೌಕರಮಾನೇರು (Officials)
ಸಮ್ಮಾರ್ಜನಿಗೆ ಅಷ್ಟು ಹೆದರುವಹಾಗೆ ತಿಳಿಯಬರುವುದಿ
ಲ್ಲ; ಅವರಿಗೆ ಪ್ರತ್ಯಹವೂ ಅದರ ಪರಿಚಯವೂ ಅನುಭ



ವವೂ ಹೆಚ್ಚುತ್ತಿದೆಯೆಂದು ತಿಳಿಯಬರುತ್ತಿದೆ. ನವಿಲು
ಹೇಗೆ ಸರ್ಪಪ್ರಿಯವೋ ಅವರೂ ಹಾಗೆಯೇ ಸಮ್ಮಾರ್ಜ
ನೀಪ್ರಿಯರು. ನೋಡಿದಕೂಡಲೇ ಭಕ್ಷಣ ಮಾಡುತಾರೆ.
ಇತರ ಇಲಾಖೆಯ ನೌಕರಮಾನೇರಿಗೆ ಬಹುಮಾನರೂಪ
ವಾಗಿ ಕೊಡಲು "ಆರ್ಡರ್ ಆಫ್ ಸ್ಟಾರ್ ಆಫ್ ಇಂಡಿ
ಯಾ," (Order of Star of India) ಎಂಬ ಬಿರುದು
ಏರ್ಪಟ್ಟಿರುವಹಾಗೆ ಜುಡಿಷಿಯಲ್ ಇಲಾಖೆಯ ಕೆಳಗಣ
ಶ್ರೇಣಿಯವರ ಸಲುವಾಗಿಯೂ ಅವರಿಗೆ ಸಹಕಾರಿಗಳಾದ
ವ್ಯವಹಾರಜೀವಿಗಳ ಸಲುವಾಗಿಯೂ ಬಂದಾರ್ಡರು
"Order of Br—K" ಎಂಬ ಬಿರುದು ಏರ್ಪಟ್ಟರೆ
ಅವರೂ ತೃಪ್ತರಾಗಿ ಹೆಚ್ಚು ಆಸಕ್ತಿಯಿಂದ ಕೆಲಸವನ್ನು
ನಿರ್ವಹಿಸುವರೆಂದು ತಿಳಿಯುತ್ತದೆ. ಆದರೆ ಅಂಥಾ ಹೊಸ
ಬಹುಮಾನಕ್ಕೆ ಉಮೇದ್ವಾರರು ಹೆಚ್ಚು ಮಂದಿ ಬರ
ಬಹುದಾದುದರಿಂದ ಅದಕ್ಕೆ ಸಾಕಾದಷ್ಟು ಸಾಮಗ್ರಿಯ
ನ್ನು ಒದಗಿಸಲು ಕಷ್ಟವಾಗುವುದೆಂದು ತೋರುತ್ತದೆ.

ಹೋದ ವರ್ಷ ಸುವೃಷ್ಟಿಯಾಯಿತು. ಆದರೆ
ಸರ್ವತ್ರ ಸಮಾನವಾಗಿರಲಿಲ್ಲ. ಅದು ಮೇಘಗಳ ಪಕ್ಷ
ಪಾತವೆಂದು ತೋರುತ್ತದೆ. ಮಳೆಯಿಲ್ಲದ ಸ್ಥಳದಲ್ಲಿರು
ವವರು ಮುಂದೆ ಹೀಗಾಗದೆ ಸರ್ವತ್ರ ಸಮಾನವಾಗಿ ಮ
ಳೆಯಾಗುವ ಸಲುವಾಗಿ ಉಪಾಯವನ್ನು ಕಂಡು ಹಿಡಿಯು
ವ ಏರ್ಪಾಡು ಮಾಡಿ ಕೊಡಿಸಬೇಕೆಂದು ಸರಕಾರಕ್ಕೆ
ಮನವೆ ಮಾಡಿಕೊಂಡಿದ್ದಾರೆ. ನಮ್ಮ ಅಭಿಪ್ರಾಯದಲ್ಲಿ
ಅಂಥಾ ಉಪಾಯನಿರೂಪಣೆಮಾಡುವುದಕ್ಕೆ ಸಲವಾಗಿ

Digitized by ROJA MUTHIAH RESEARCH LIBRARY

ಒಂದು ಕಮಿಟಿಯನ್ನು ಏರ್ಪಾಡುಮಾಡುವುದುಚಿತವೆಂದು ತೋರುತ್ತದೆ. ನಮ್ಮ ಇತರ ಸಹಯೋಗಿಗಳು (Contemporaries) ಸರಕಾರದವರು ಆಯಾದೇಶಕ್ಕೆ ಬೇಕಾಗುವ ಮೇಘಗಳ ಅಂದಾಜುಪಟ್ಟಿಗಳನ್ನು ಮೊದಲೇ ಮಾಡಿಸಿ ಅದರಂತೆ ನಡೆಯಬೇಕೆಂದು ಅಪ್ಪಣೆ ಮಾಡಿದರೆ ಅಂಥಾ ಪಕ್ಷಪಾತಾಚರಣೆಗೆ ಅವಕಾಶವಿರದೆಂದು ಹೇಳುತ್ತಾರೆ. ಆದರಿಂದ ಉಪಕಾರವಾಗದು. ಆದರೆ ನಮ್ಮ ದೇಶದ ಮೇಘಗಳು ಸೌದಾಮಿನೀ ಪ್ರಿಯವಾಗಿದ್ದರೂ ಸೌದಾಮಿನಿಯನ್ನು ಬಿಟ್ಟು ದ್ರವ್ಯಾಶೆಯಿಂದ ದೇಶಾಂತರಕ್ಕೆ ಹೊರಟು ಹೋಗುತ್ತವೆ. ನಮ್ಮ ಅಭಿಪ್ರಾಯದಲ್ಲಿ ಈ ಮೇಘದ ಲವಾಜಮೆಯನ್ನು ತೆಗೆದುಹಾಕಿ ಭಿಸ್ತಿಯವರನ್ನು ಏರ್ಪಾಡುಮಾಡುವುದು ಉತ್ತಮವೆಂದು ತೋರುತ್ತದೆ. ಅವರು ಪ್ರತಿಯೊಂದು ಕ್ಷೇತ್ರಕ್ಕೂ ಬೇಕಾಗುವಷ್ಟು ನೀರನ್ನು ಹಾಕುವುದನ್ನು ಸ್ಥಳೀಯ ಅಧಿಕಾರಿಗಳು ನೋಡಿಕೊಳ್ಳಬಹುದು.

ನಮ್ಮ ದೇಶದ ಹೆಂಗಸರು ದೇಶಹಿತೈಷಿಗಳಲ್ಲ, ಅವರು ಹಾಗೆ ಹಿತೈಷಿಗಳಾಗಿದ್ದರೆ ಭಿಸ್ತಿಗಳ ಲವಾಜಮೆಯು ಆವಶ್ಯಕವಿರದು. ಅನೇಕರು ನಿತ್ಯವೂ ಮನೆಯಲ್ಲಿ ಅಳುವುದನ್ನು ಬಿಟ್ಟು, ಗದ್ದೆಹೊಲಗಳಲ್ಲಿ ಅತ್ತುಬಂದರೆ ಅನಾಯಾಸವಾಗಿ ವೃಷ್ಟಿಕಾರ್ಯವು ನಿರ್ವಾಹವಾಗುವುದಲ್ಲದೆ ಮೇಘದ ಇಲಾಖೆಯನ್ನು ಪೂರ್ತಿಯಾಗಿ ತೆಗೆದುಹಾಕಬಹುದು. ಆದರೆ ಆಕಾಶದ ವೃಷ್ಟಿಗೆ ಬದಲಾಗಿ ನಾರಿಯರ ನಯನಾಶ್ರುವೃಷ್ಟಿಯಾಗಬೇಕೆಂದು ಏರ್ಪಾಡಾಗುವ ಪಕ್ಷ

Digitized by ROJA MUTHIAH RESEARCH LIBRARY



ಕ್ಕೆ ಜನರ ಮಾನಸಿಕ ಮಂಗಳಾರ್ಥವಾಗಿಯೂ ಶಾರೀರಿಕ ಮಂಗಳಾರ್ಥವಾಗಿಯೂ ಪಕ್ಕಾ ಪೋಲಿಸ್ ಬಂದೋಬಸ್ತಿಗಾಗಿ ಲವಾಜಮೆಯು ಹೆಚ್ಚು ಬೇಕಾಗುವುದು. ಮೇಘದ ವಿದ್ಯುತ್ತಿನಿಂದ ಹೆಚ್ಚು ಪ್ರಾಣಿಯು ನಾಶವಾಗದು. ರಮಣಿಯರ ನಯನಮೇಘದ ಕಟಾಕ್ಷದ ವಿದ್ಯುತ್ತಿನಿಂದಲಾದರೋ ಗದ್ದೆಹೊಲಗಳಲ್ಲಿರುವ ರೈತಾಪಿ ಹುಡುಗರ ಗತಿಯೇನಾಗುವುದೋ ಹೇಳಲಸಾಧ್ಯ. ಪೋಲಿಸ್ ಪಹರೆಯಿರುವುದು ಒಳ್ಳೆಯದು.

ಉಳಿದ ಇಲಾಖೆಗಳಲ್ಲಿ ವಿಶೇಷ ಕಾರ್ಯಗಳೇನೂ ನಡೆದಹಾಗೆ ತೋರುವುದಿಲ್ಲ. ವಿದ್ಯಾಭ್ಯಾಸದ ಇಲಾಖೆಯಲ್ಲಿ ಪೋಲಿನ ಅಧಿಕಾರಗಳು ಗಮನಿಸಬೇಕಾದ ಒಂದೆರಡು ಅಂಶಗಳನ್ನು ಕುರಿತು ಸೂಚಿಸುವೆವು— ಮೊದಲನೆಯದು- ವಿದ್ಯಾರ್ಥಿಗಳಲ್ಲನೇಕರು ಇನ್ನೂ ಉಪನೇತ್ರಗಳಿಲ್ಲದೆ ಪುಸ್ತಕಗಳನ್ನೋದುತ್ತಾರೆ. ಹೀಗೆ ಮಾಡುವುದರಿಂದ ಮುಂದಕ್ಕೆ ಅವರ ಕಣ್ಣುಗಳು ಹೋಗಿ, ದೃಷ್ಟಿಪಾಟವಕ್ಕೆ ವ್ಯಾಘಾತವುಂಟಾಗಬಹುದು. ಎರಡನೆಯದು- ಹುಡುಗರಲ್ಲಿ ಕೆಲವರು ಪಾಠಗಳನ್ನು ಮನವಿಟ್ಟು ಕಂಠಸ್ಥಮಾಡುತ್ತಾರೆಂದು ಕೇಳಿ ಹೆಚ್ಚು ವಿಷಾದಿಸುವೆವು. ಅದರಿಂದ ಅವರ ಜ್ಞಾಪಕಶಕ್ತಿಯೇ ಅಳಿಸಿಹೋಗುವುದೆಂದು ಸರ್ವಮತಸಿದ್ಧವಾಗಿದೆ. ಶಾಲೆಗಳಲ್ಲೋದುವ ಹುಡುಗರ ಶಾರೀರಿಕ, ಮಾನಸಿಕ ವೃತ್ತಿಗಳನ್ನು ವೃದ್ಧಿಗೊಳಿಸುವುದು ಇಲಾಖೆಯವರ ಕೆಲಸವಾಗಿರುತ್ತ ಉಕ್ತ ಎರಡಂಶಗಳಿಗೆ ಅವರು ಲಕ್ಷ್ಯಕೊಡದಿರುವುದು ಬಹಳ

ಆಶ್ಚರ್ಯವಾಗಿದೆ. ಹುಡುಗರ ಯೋಗಕ್ಷೇಮವನ್ನು ಮನೆಯಲ್ಲಿ ತಾಯಿತಂದೆಗಳು ನೋಡಿಕೊಳ್ಳದಿದ್ದರೂ ನಿಪುಣರಾದ ಉಪಾಧ್ಯಾಯರು ಹುಡುಗರನ್ನು ಸುಲಭವಾಗಿ ಮಾರ್ಗಕ್ಕೆ ತರಬಹುದು.

ದುರ್ವತ್ಸರವಾಗಲಿ, ಸುವತ್ಸರವಾಗಲಿ, ಸಂವತ್ಸರವು ಕಳೆದುಹೋಯಿತು ! ಅದು ಹಿಂದಿರುಗಿ ಬರುವದಿಲ್ಲವೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅದು ಹಿಂದಿರುಗಿ ಬರಬೇಕೆಂದು ಯೂರೂ ಪ್ರಯತ್ನಪಡೆರು; ಪಟ್ಟರೂ ಪ್ರಯತ್ನವು ನಿಷ್ಫಲವಾಗುವುದು.

ಮೈಸೂರು. }
1906 } ಬಿ. ವೆಂಕಟಾಚಾರ್ಯ್ಯ.

## ಬಿ. ವೆಂಕಟಾಚಾರ್ಯರಿಂದ ರಚಿಸಲ್ಪಟ್ಟಿರುವ ಗ್ರಂಥಗಳು.

| | | ರೂ. | ಆ. | ಪೈ. |
|---|---|---|---|---|
| ಅಡವಿಯ ಹುಡುಗಿ | ... ... | ೦ | ೮ | ೦ |
| ಅತ್ತಿಗೆ | (ಹೊಸಪುಸ್ತಕ) | ೦ | ೩ | ೦ |
| ಅಹಲ್ಯಾಬಾಯಿ | ... ... | ೦ | ೮ | ೦ |
| ಅಮೃತಪುಳಿನ | (ಅಚ್ಚಾಗುತ್ತಿದೆ) | | | |
| ಆನಂದಮಠ | ... ... | ೧ | ೦ | ೦ |
| ಇಂದಿರಾ | (ಎರಡನೆಯಾವರ್ತಿ ಪರಿವರ್ಧಿತವಾದುದು) | ೦ | ೬ | ೦ |
| ಇದೊಂದುಚಿತ್ರ | ... ... | ೦ | ೦ | ೬ |
| ಉನ್ಮಾದಿನಿ | ... ... | ೦ | ೬ | ೦ |
| ಉಪವಾಸ | ... ... | ೦ | ೦ | ೬ |
| ಉನ್ನತಿ | ... ... | ೦ | ೦ | ೬ |
| ಕಪಾಲಕುಂಡಲ | ... ... | ೦ | ೧೨ | ೦ |
| ಕಮಲಾಕಾಂತ | (ಎರಡನೆಯ ಮುದ್ರಣ) | ೦ | ೨ | ೦ |
| ಕೊಹಿನೂರು | (ಹೊಸದು) | ೦ | ೧೨ | ೦ |
| ಗ್ರಾಮ್ಯಕಥಾ | ... ... | ೦ | ೦ | ೬ |
| ಗೀತೋಕ್ತಧರ್ಮ | ... | ೦ | ೦ | ೬ |
| ಚಂದ್ರಶೇಖರ | ... ... | ೧ | ೦ | ೦ |
| ಚಿರತ್ನನಾಟಕರತ್ನ | ... | ೦ | ೧೦ | ೦ |

Digitized by ROJA MUTHIAH RESEARCH LIBRARY

| | | | | |
|---|---|---|---|---|
| ದುರ್ಗೇಶ ನಂದಿನೀ | ... | ೧ | ೮ | ೦ |
| ದೇವೀಚೌಧುರಾಣೀ | ... | ೧ | ೮ | ೦ |
| ದೇಶಭಾಷೋನ್ನತಿಯ ಅವಶ್ಯಕತೆ | | ೦ | ೧ | ೦ |
| ನೀಳಾಗೀತಾ | ... ... | ೦ | ೨ | ೦ |
| ಪರಿಮಳಾ | ... ... | ೦ | ೧೨ | ೦ |
| ಪ್ರಾಚೀನ ನವೀನ ಸ್ತ್ರೀಪುರುಷರು | | ೦ | ೩ | ೦ |
| ಭರತಖಂಡದ ಪೂರ್ವವೃತ್ತ | ... | ೦ | ೮ | ೦ |
| ಭಾರತಮಹಿಳಾ | ... ... | ೦ | ೮ | ೦ |
| ಭ್ರಾಂತಿವಿಲಾಸ (ಎರಡನೆಯ ಮುದ್ರಣ) | | ೦ | ೧೨ | ೦ |
| ಮನೋರಮೆ | (ಅಚ್ಚಾಗುತ್ತಿದೆ) | | | |
| ಮಾಧವೀಲತಾ | ... ... | ೧ | ೦ | ೦ |
| ಮಾಲತೀ (ಹೊಸ ಪುಸ್ತಕ) | ... | ೦ | ೩ | ೦ |
| ಮೃಣ್ಮಯೀ | ... ... | ೧ | ೦ | ೦ |
| ಮುಗುಳಾಂಗುರೀಯ | ... | ೦ | ೪ | ೦ |
| ಯೂಟಿಲಿಟಿ (ಅಥವಾ ಉದರದರ್ಶನ) | | ೦ | ೦ | ೬ |
| ರಜನೀ | ... ... | ೦ | ೧೨ | ೦ |
| ರಮಾಬಾಯಿ | ... ... | ೦ | ೪ | ೦ |
| ರಾಜಸಿಂಹ | ... ... | ೧ | ೦ | ೦ |
| ರಾಧಾರಾಣೀ (ಎರಡನೆಯಾವರ್ತಿ ಪರಿವರ್ಧಿತವಾದುದು) | | ೦ | ೩ | ೦ |
| ರಾಮೇಶ್ವರನ ಅದೃಷ್ಟ | ... | ೦ | ೨ | ೬ |
| ಲೋಕರಹಸ್ಯ | ... ... | ೦ | ೬ | ೦ |

ಇತ್ಯಾದಿ ಇತ್ಯಾದಿ.

Digitized by ROJA MUTHIAH RES

11437

# ಶಾಲಿಹೋತ್ರ (ಅಶ್ವಪರೀಕ್ಷಾ.)

## ಮಸ್ತಕ ಪರೀಕ್ಷಾ.

ಯಾವ ಕುದುರೆಯ ಮಸ್ತಕದಲ್ಲಿ ಕೋಡಿನ ಚಿನ್ಹವಿರುತ್ತದೆಯೋ ಆ ಕುದುರೆಯನ್ನು ಸರ್ವಥಾ ತಗೊಳ್ಳಲಾಗದು. ಇಂಥದೊಂದು ಭರತರಾಜನಲ್ಲಿತ್ತು. ಅವನ ಅವಸ್ಥೆ ಸರ್ವರಿಗೂ ಅವಗತ ಉಂಟು.

ಕಿವಿಯಲ್ಲಿ ಎರಡು ಸುಳಿಗಳಿರುತ್ತವೆ. ಅವು ದೃಷ್ಟಿಗೋಚರವಾಗುವದಿಲ್ಲ. ಅದು "ಶೂನ್ಯ ಮಸ್ತಕ" ವೆನಿಸಲ್ಪಡುತ್ತದೆ. ಅದು ಬಹುಶಃ ಬದುಕುವದಿಲ್ಲ. ಅದರ ಪ್ರಮಾಣವೇ ಪಂಚವರ್ಷ ಅಲ್ಲಿಯವರೆಗೂ ಬದುಕಿದರೆ, ವಡಿಯನನ್ನು ವಿಪತ್ತಿನಲ್ಲಿಯೂ, ದರಿದ್ರಾವಸ್ಥೆಯಲ್ಲಿಯೂ, ಬೀಳಮಾಡುವದು.

## ಕರ್ನ ಪರೀಕ್ಷಾ

ಕಿವಿಯಮೇಲೆ ಸುಳಿಯಿದ್ದರೆ, ಅದು "ಕರ್ನಮೂಲ" ವೆನಿಸಲ್ಪಡುತ್ತದೆ. ಇದು ಕೆಟ್ಟದು. ತಗೊಂಡವನ ಸಂಪತ್ತು ನಾಶವಾಗುವದು.

ಎಲ್ಲ ಕುದುರೆಗಳಿಗೂ, ಎರಡೆರಡು ಕಿವಿಗಳಿರುತ್ತವೆ. ಪರಂತು ಒಂದಾನೊಂದು ಕುದುರೆಗೆ ಎರಡರ ಪೈಕಿ ಒಂದು ಕಿವಿಗೆ ಶಾಖೆ ಇರುತ್ತದೆ. ಅದು "ತ್ರಿಕರ್ನ" ವೆನಿಸಲ್ಪಡುತ್ತದೆ. ಇಂಥದನ್ನು ಸರ್ವಥಾ ಮಾರತಗೊಳ್ಳಕೂಡದು. ಇಂಥದೇ ಒಂದು ಹಯವು ಹರಿಶ್ಚಂದ್ರ ರಾಜನ ಬಳಿಯಲ್ಲಿತ್ತಂತೆ ಅವನು ರಾಜಭ್ರಷ್ಟನಾಗಿ, ಮಹತ್ಸಂಕಟಕ್ಕೊಳಗಾದದ್ದೇ ಉದಾಹರಣವು.

## ಬಾಲ ಚಿಕಿತ್ಸಾ.

ಯಾವದೊಂದು ಕುದುರೆಯ ಹಣಿಯಮೇಲೆ ಉದ್ದವಾಗಿ ತ್ರಿಕೋನಾಕೃತಿಯಂತಿದ್ದರೆ, ದರಿದ್ರವೆಂದರಿಯುವದು.

ಹಣೆಯಲ್ಲಿ ಕೆಳಗೆ ಎರಡು ಕಡಿಗೆರಡು, ಮೇಲೆಬಂದು ಹೀಗೆ ಮೂರು ಸುಳಿಗಳಿದ್ದರೆ " ಬಾಲಿಂಗ " ವೆನಿಸುವದು. ಯಜಮಾನನಿಂದ ಎಷ್ಟು ಪ್ರೀತಿಸಲ್ಪಟ್ಟರೂ, ಬಿಸಾಟದೆ ಬಿಡದು.

ಹಣೆಯಲ್ಲಿ ಪಾಂಕ್ತವಾಗಿ, ಅಡಕಲದಂತೆ, ಬಂದರ ಮೇಲೊಂದು ಮೂರು ಸುಳಿಗಳಿರಲು, ಹತ್ತುವವನ ಪತ್ನಿಯ ಮರಣಕ್ಕೆ ಕಾರಣವಾಗಬಹುದು.

ಹಣೆಯಮೇಲೆ ಬಂದರಮೇಲೊಂದು ಎರಡು ಸುಳಿಗಳಿದ್ದರೆ ಅದು " ಅಕ್ಷ " ವೆನಿಸಲ್ಪಡುತ್ತದೆ. ಇಂಥ ಹಯವನ್ನು ತಗೊಂಡ ಮನುಷ್ಯನಿಗೆ ಅಪಮೃತ್ಯು ಸಂಭವಿಸುವದು.

ಹಣಿಯಮೇಲೆ ಸಮವಾಗಿ, ಎರಡು ಸುಳಿಗಳಿದ್ದರೆ.ಅದು " ಚಿಮಟಾ " ಎನಿಸುವದು. ಇಂಥ ಲಕ್ಷಣದ ಕುದುರೆಯು ಸಂಕಟಕ್ಕೆ ಪ್ರಾಪ್ತನಾಗ ಮಾಡುವದು.

ಸರ್ವಾಂಗವು ಒಂದೇ ವರ್ಣವಿದ್ದು, ಹಣಿಯಮೇಲ್ಕೆಬಿಳೇ ಚಿಕ್ಕೆ ಇರುವ ಗಂಡು ಕುದುರೆಯನ್ನುಕೊಳ್ಳಲಾಗದು. ಹೆಣ್ಣು ಕುದುರೆಯನ್ನು ಅವಶ್ಯವಾಗಿ ತಕ್ಕೊಳ್ಳಬೇಕು.

ಮುಖದಮೇಲೆ ಬೇರೆ ಬೇರೆ ಬಣ್ಣದ ಚಿಕ್ಕಿಗಳಿದ್ದರೆ, ಅದು " ಅರ್ಜಲಿ " ಎನಿಸಲ್ಪಡುತ್ತದೆ. ಇದನ್ನು ತಗೊಂಡ ಒಡಿಯನ ಸಂಪತ್ತು ನಾಶವಾಗುವದು.

---

## ನೇತ್ರ ಚಿಕಿತ್ಸಾ.

ಒಂದು ಕಣ್ಣು ಚನ್ನಾಗಿದ್ದು ಮತ್ತೊಂದು ಬೆಕ್ಕಿನಕಣ್ಣಿನಂತಿದ್ದರೆ " ಕೈರಾ " ವೆನಿಸಲ್ಪಡುವದು. ಇಂಥದನ್ನೂ ತಗೊಳ್ಳಲಾಗದು.

Digitized by ROJA MUTHIAH RESEARCH LIBRARY



ಹುಬ್ಬಿನ ಮೇಲೆ ಅಥವಾ ಕಣ್ಣಿನ ಕೆಳಗೆ ಸುಳಿಯಿದ್ದರೆ ಅದು " ಲೋಚನಾವರ್ತ " ವೆನಿಸುವದು. ಇದಾದರೂ ಕೆಟ್ಟದೇ.

ಎರಡು ಕಣ್ಣುಗಳ ಎವೆಯಕೆಳಗೆ ಸುಳಿ ಇರಲು, ಕಣ್ಣುಗಳಿಂದ ನೀರು ಸುರಿಯುತ್ತಿರಲು, " ಅಶ್ರುಧಾಳ " ವೆನಿಸುತ್ತದೆ. ತನ್ನ ವಡಿಯನ ದುಃಖಕ್ಕೆ ಕಾರಣವಾಗುವದು.

ಎರಡು ಕಂಣುಗಳ ಮಧ್ಯದಲ್ಲಿ ಹಣಿಯಮೇಲೆ ಸುಳಿ ಇರಲು, " ಶೋಕಾವರ್ತ " ವೆನಿಸಲ್ಪಡುವದು.

ಕಣ್ಣಿನ ಮೇಲೆಯೂ, ಎದೆಯಮೇಲೆಯೂ, ಕೊರಳಲ್ಲಿಯೂ, ಕೂದಲುಗಳ ಗುಂಪು ಗಂಟಿನಂತೆ ತೋರುತ್ತಿರುತ್ತವೆ. ಅದು " ಉರಗಲ " ವೆನಿಸುತ್ತದೆ. ಇದೂ ಕೆಟ್ಟದೇ.

---

## ನಾಶಿಕ ಪರೀಕ್ಷಾ.

ಮುಖದಮೇಲೆ ಬಿಳೇ ಪಟ್ಟಿ ಇದ್ದು ಮೂರು ಸ್ಥಳದಲ್ಲಿ ಹರಹರಕ ಇದ್ದರೆ ಲೇಸಲ್ಲವು.

ಮೂಗಿನಮೇಲೆ ಬಿಳೇ ಚಿಕ್ಕಿ ಇದ್ದರೆ, ಇದೂ ಕೆಟ್ಟದ್ದೆ ತಗೊಳ್ಳ ಬೇಡಿರಿ.

ಯಾವ ಕುದುರೆಯು ಮೂಗಿನ ಹೊಳ್ಳೆಯಮೇಲೆ ಸುಳಿ ಇದ್ದರೆ " ನಾಶಿಕಾವರ್ತ " ವೆನಿಸಲ್ಪಡುವದು. ಇದೂ ಕೆಟ್ಟದೇ.

ಕುದುರೆಯ ಸರ್ವಾಂಗವು ಏಕರಂಗವಿದ್ದು ಮುಖವು ಕಪ್ಪಾಗಿದ್ದರೆ " ಕಾಕ ಮುಖಿ " ಎನಿಸಲ್ಪಡುವದು. ಇದನ್ನು ತಗೊಳ್ಳಬಾರದು.

ಸರ್ಪಾಕಾರದ ಮುಖವುಳ್ಳ ಕುದುರೆಯು " ಅಹಿಮುಖಿ " ಎನಿಸಲ್ಪಡುವದು. ಇದು ಬಹು ಕೆಟ್ಟದ್ದು ಇದರ ಅನುಭವವು ಪರೀಕ್ಷಿತ ರಾಜನಿಗೆ ಬಂದಿರುತ್ತದೆ.

ದವಡಿಗೆ ಸಮಾನವಾಗಿ ಗಲ್ಲದಮೇಲೆ ಸುಳಿ ಇದ್ದರೆ " ದಂಷ್ಟ್ರ ಶೃಂಖಲ " ವೆನಿಸುವದು. ಇದೂ ಒಳ್ಳೇದಲ್ಲ.

ಮಂಡೂಕದಂತೆ ಮುಖವುಳ್ಳದ್ದು " ಮಂಡೂಕಮುಖಿ " ಗಿಳಿಯಂತೆ ಮುಖವುಳ್ಳದ್ದು " ಕೀರ ಮುಖಿ " ಎನಿಸುವವು. ಇಂಥವುಗಳನ್ನು ಸರ್ವಥಾ ತೆಗೊಳ್ಳಲಾಗದು.

ಕೆಳಗಿನ ತುಟಿಯ ಕಿಂತಲು ಮೇಲಿನ ತುಟಿಯು ಆಕುಂಚಿತವಾಗಿದ್ದರೆ " ಖರ ಮುಖಿ " ಎನಿಸುವದು. ಅದು ಎಜಮಾನನಿಗೆ ಕಲಂಕ ಹಚ್ಚುವದು. ಇದರಂತೆ ವಾನರಮುಖಿಯೆಂದು ತಿಳಿಯತಕ್ಕದ್ದು.

ಮಂಡೂಕ ಮುಖಿ, ಕೀರಮುಖಿ, ಖರಮುಖಿ, ವಾನರ ಮುಖಿ, ಈ ನಾಲ್ಕು ಲಕ್ಷಣಗಳುಳ್ಳ ಕುದುರೆಗಳು ಬಹು ದುಃಖದಾಯಕವೆಂದು ಅಶ್ವಹೃದಯವೇತ್ತರು ಹೇಳಿರುವರು.

ತುಟಿಗೆ ತುಟಿ ಹಚ್ಚಿ ಒದರುವ ಕುದುರೆಯು ಬಹಳ ಕೆಟ್ಟದು. ತಗೊಂಡವನ ವಂಶಧ್ವಂಸ ಮಾಡುವದು.

---

## ಮುಖ ಪರೀಕ್ಷಾ

ಏಳು ಹಲ್ಲಿನ ಕುದುರೆಯು ಯುದ್ಧದಲ್ಲಿ ಅಪಯಶವನ್ನೀಯುವದು.

ಪಂಚದಂತೀ ಕುದುರೆಯು " ಹೀನದಂತಿ " ವೆನಿಸುವದು. ತಗೊಂಡಾಕ್ಷಣ ತನ್ನ ಕೆಟ್ಟ ಗುಣವನ್ನು ತೋರಿಸದೆ ಬಿಡದು.

ಚತುರ್ದಂತೀ ಕುದುರೆಯು "ಮಧ್ಯದಂತಿ " ವೆನಿಸುವದು. ಇದು ಸ್ವಾಮಿ ಘಾತಕವು.

ಲಗಾಮ ಹಾಕುವಾಗ್ಯೆ ನಾಲಿಗೆಯನ್ನು ಹೊರಗೆ ತೆಗೆಯುವ ಕುದುರೆಯು " ಸರ್ಪಣಿ " ಯೆನಿಸುವದು. ತಗೊಂಡವನನ್ನು ಚಿಂತೆಯಲ್ಲಿ ಮುಳಗಿಸುವದು.

ಮೇಲಿನ ಹಲ್ಲು ಉದ್ದವಿದ್ದು ಕೆಳಗಿನ ಹಲ್ಲುಗಳು ಕಿರಿದಾಗಿದ್ದು ಮೇಲಿನ ಹಲ್ಲಿನ ಅಂತಸ್ಥಿನಲ್ಲಿ ಕೆಳಗಿನ ಹಲ್ಲುಗಳು ಶೇರಿರುತ್ತವೆ. ಹಲ್ಲಿಗೆ ಹಲ್ಲು ಹತ್ತದಂಥ ಕುದುರೆಗೆ " ಕರಾಲವದನ " ವೆನ್ನುತ್ತಾರೆ. ಇದೂ ಲೇಸಲ್ಲವು.

Digitized by ROJA MUTHIAH RESEARCH LIBRARY



ಕೆಳಗಿನ ಹಲ್ಲುಗಳು ಉದ್ದವಿದ್ದು ಕಿರಿದಾದ ಮೇಲಿನ ಹಲ್ಲುಗಳ ಅಂತಸ್ಥಿನಲ್ಲಿ ಶೇರಿರುವಂಥಾದ್ದಕ್ಕೆ " ವಿಕ್ರಾಳ " ವೆನುತ್ತಾರೆ. ಇಂಥಾ ಕುದುರೆಯು ಬಲಿಚಕ್ರವರ್ತಿಯ ನಾಶಕ್ಕೆ ಕಾರಣವಾಯಿತು.

ಯಾವ ಕುದುರೆಯ ನೆತ್ತಿಯಮೇಲೆ ಕರೇ ಚಿಕ್ಕಿ ಇದ್ದರೆ ಅದು " ಕೃಷ್ಣ ತಾಲುಕಾ " ವೆನಿಸುವದು ಇದೂ ಕೆಟ್ಟದ್ದು ಮನೆಯಲ್ಲಿ ಇಟ್ಟುಕೊಳ್ಳಲಾಗದು.

ಯಾವ ಕುದುರೆಯು, ಮೇವು, ದಾಣೆ ತಿಂದು, ತಲಿಹಾಕುತ್ತಿರುವದು. ಅದು ಇರುವದರಿಂದ ಕುಲಕ್ಷಯವಾಗುವದು.

---

## ಕಂಠ ಪರೀಕ್ಷಾ.

ಯಾವ ಕುದುರೆಯ ಕಂಠದಲ್ಲಿ ತೊಗಲು ಜೋತಾಡುತ್ತಿರುವದು. ಅದು " ಕೌಸ್ತುರೀ " ವೆನಿಸುವದು. ಇಂಥಾದ್ದನ್ನು ತೆಗೆದುಕೊಳ್ಳಬಾರದು.

ಕೊರಳಲ್ಲಿ ಸುಳಿ ಇದ್ದರೆ ಅದು " ಕಂಠಾಭರಣ "ವೆನಿಸುವದು. ಇದು ಉತ್ತಮವು ನಿರ್ಭಯದಿಂದ ತೆಗೆದುಕೊಳ್ಳರಿ.

---

## ಕೊರಳ ಪರೀಕ್ಷಾ.

ಕುದುರೆಯ ಎದೆಯ ಮೇಲ್ಭಾಗದಲ್ಲಿ ಸುಳಿ ಇದ್ದರೆ " ದೇವಮಣಿ " ಎನಿಸುವದು. ಸ್ವಲ್ಪ ಕೊರಳಕಡಿಗಿದ್ದರೂ, ದೇವಮಣಿಯೇ ಎಂದರಿಯುವದು. ಹೀಗಿದ್ದ ಹೆಣ್ಣುಗಂಡು ಎರಡೂ ಉತ್ತಮವು.

---

## ಗೋಮ ಪರೀಕ್ಷಾ.

ಕೊರಳಲ್ಲಿಯೂ, ಹೆಡಕಿನಮೇಲೆಯೂ, ಗೋಮವಿರುವದು. ಅದು ಎಂತೊಂದಡೆ, ಉದ್ದವಾದ ರೇಖೆಯ ಹಾಗಿದ್ದು ಆ ಕುದುರೆಯು ಒಂದು ಅಥವಾ ಎರ್ಡು ಗೇಣಿನಷ್ಟು ಇರುತ್ತದೆ.

ಅದಕ್ಕೆ ಕೆಳಗೆ ಅಥವಾ ಮೇಲೆ ಸುಳಿ ಇರುತ್ತದೆ ಕೆಳಗೆ ಇದ್ದರೆ"ಊರ್ಧ್ವಮುಖಿ"ಅನ್ನುತ್ತಾರೆ. ಮೇಲಿದ್ದರೆ "ಅಧೋಮುಖಿ" ಯೆನಿಸುವದು. ಅದರಂತೆ ಮಸ್ತಕದಲ್ಲಿದ್ದರೆ ಅದೂ "ಊರ್ಧ್ವಮುಖಿಯೇ" ಇದರಿಂದ ಬಂಧುಗಳಲ್ಲಿ ಕಲಹ ಹುಟ್ಟುವದು. ಬಳಗದಲ್ಲಿ ದುಃಖಉಂಟಾಗುವದು. ಕಾರಣ ತೆಗೆದುಕೊಳ್ಳಲಾಗದು.

ಅಧೋಮುಖಿ ಗೋಮ, ಕಂಠಕ್ಕೆ ಇದ್ದರೆ ತೆಗೆದುಕೊಳ್ಳುವವರಿಗೆ ಶುಭವು ಊರ್ಧ್ವಮುಖಿ ಇದ್ದರೆ, ಕೆಡಕು. ಹೆಡಕಿನಮೇಲೆ ಊರ್ಧ್ವಮುಖಿ ಇದ್ದರೆ ಮಾರುವವನಿಗೆ ದುಃಖವಾಗುವದು.

ಕಾಲುಗಳಮೇಲೆ ಗೋಮವಿದ್ದರೆ ಅದೂ ಕೆಟ್ಟದ್ದೇ ಯಾವ ಸ್ಥಳದಲ್ಲಿಯಾದರೂ, ಊರ್ಧ್ವಮುಖಿ ಗೋಮವಿದ್ದರೆ, ತೆಗೆದುಕೊಳ್ಳಬಾರದು. ಅಧೋಮುಖಿ ಗೋಮವಿದ್ದರೆ ತೆಗೆದುಕೊಂಡವನಿಗೆ ಲೇಸನ್ನುಂಟು ಮಾಡುವದು.

ಎದಿಯಲ್ಲಿ ಸುಳಿ ಇದ್ದರೆ ಅದು "ಹೃದಾವರ್ತ" ವೆನಿಸುವದು. ತಕ್ಕೊಂಡವನಿಗೆ ದುಃಖವನ್ನುಂಟು ಮಾಡುವದು. ಅಂಥಾದ್ದು ಮನೆಯ ಕುದುರೆಯಿಂದ ಹುಟ್ಟಿದ್ದು ಆದರೂ ಇಟ್ಟುಕೊಳ್ಳಲಾಗದು.

ಎದೆಯಲ್ಲಿ ಸುಳಿಯಿದ್ದು ಅದರಲ್ಲಿ ಐದು ಚಿಮಟಾದಂತಿದ್ದರೆ ಅದು, "ಪಂಚಮುಖಿ" ವೆನಿಸುವದು. ಇದು ಅತ್ಯುತ್ತಮವು.

ಕಿವಿಯ ಹತ್ತರಾಗಲಿ, ಆಚೆಕಡಿಗಾಗಲಿ, ಗುಂಪ್ರಗೂದಲಿದ್ದರೆ ದೋಷವಿಲ್ಲ. ಹೆಡಕಿನಮೇಲೆ ಸುಳಿ ಇದ್ದರೆ ಯುದ್ಧದಲ್ಲಿ ನಾಶಮಾಡುವದು. ಹಾಗೂ ಯಜಮಾನಪತ್ನಿಯ ನಾಶಕ್ಕೆ ಕಾರಣವು. ತೆಗೆದುಕೊಳ್ಳಲಾಗದು.



## ಅಯ್ಯಾಲ ಪರೀಕ್ಷೆಯು

ಅಯ್ಯಾಲ ಅಂದರೆ ಹೆಡಕಿನ ಮೇಲಿನ ಕೂದಲು, ಅವು ಕೆಲವು ಎಡಕ್ಕೂ, ಕೆಲವು ಬಲಕ್ಕೂ, ಬಿದ್ದಿರುವವು. ಅವು "ಮಹಾಲಲೋಚನ" ವೆನ್ನಿಸುವವು. ಬಹಳ ಕೆಟ್ಟದ್ದು ತೆಗೆದುಕೊಳ್ಳಬಾರದು.

ಗಂಡಿಗೆ ಬಲಕ್ಕೂ, ಹೆಣ್ಣಿಗೆ ಎಡಕ್ಕೂ, ಇದ್ದರೆ ಲೇಸು.

ಅಯ್ಯಾಲ ಬಹಳ ಉದ್ದ ಇದ್ದರೂ, ಖುರದ ಕೂದಲು ಬಹಳ ಉದ್ದ ಇದ್ದರೂ, ಅತ್ಯುತ್ತಮವು. ಅದು "ಚಿಂತಾಮಣಿ" ವೆನಿಸುವದು.

---

## ದರಜೀ ಪರೀಕ್ಷಾ.

ದರಜಿ ಜಾಗಾ ( ಥಡಿಯ ಮುಂಭಾಗದ ಕೊನೆ ಅಂದರೆ ಕೂಡ್ರುವ ಡುಬ್ಬದ ಸ್ಥಳ ) ದಲ್ಲಿ ಸುಳಿ ಇದ್ದರೆ ಉತ್ತಮವು. ಬೆನ್ನುಮೇಲೆ ಥಡಿಯ ಮಧ್ಯಭಾಗದಲ್ಲಿ ಸುಳಿ ಇದ್ದರೆ ಅದಕ್ಕೆ "ಆಸನ ಸುಳಿ" ಎಂಬ ಹೆಸರು. ಇದು ಬಹಳ ಕೆಟ್ಟದ್ದು.

ಏಕರಂಗಿ ಕುದುರೆಯನ್ನು ಬಿಸಲಲ್ಲಿ ನಿಲ್ಲಿಸಲಾಗಿ ಬೆನ್ನು ಕಾಂತಿಗೊಂಡರೆ ಉತ್ತಮ ಕುದುರೆಯೆಂದು ತಿಳಿಯತಕ್ಕದ್ದು. ವ್ಯಾಘ್ರರೂಪದಂತೆ ತೋರಿದರೆ ಅದು "ವ್ಯಾಘ್ರಕಾಂತಿ" ಎನಿಸುವದು. ಅದು ಕೆಟ್ಟದ್ದು.

ಏಕರಂಗಿ ಕುದುರೆಯಿದ್ದು ಬೆನ್ನಮೇಲೆ ಬೆಳ್ಳಗಿದ್ದರೆ ಅದು "ಹರಿನಾಗವಿ" ಎನಿಸುವದು. ಅದು ಯಜಮಾನನಿಗೆ ಕೆಟ್ಟದ್ದು.

ನಾಲ್ಕುಕಾಲು ಬೆಳ್ಳಗೆಯಿದ್ದು ಹಣಿಯಮೇಲೆ ಬಿಳೇ ಪಟ್ಟಿ ಇದ್ದರೆ ಅದು "ಪಂಚಕಲ್ಯಾಣಿ" ಎನಿಸುವದು. ಅದು ಯಜಮಾನನನ್ನು ಸಂತೋಷಿಸುವದು.

ಬಾಲದ ಹತ್ತರ ಸುಳಿ ಇದ್ದರೆ ಅದು "ಪ್ರುಚ್ಛಾವರ್ತ" ವೆನಿಸಿಕೊಂಬುವದು. ಅದು ಘಾತಕವೆಂದರಿಯುವದು.

Digitized by ROJA MUTHIAH RESEARCH LIBRARY

ಬಾಲವನ್ನು ವತ್ತಟ್ಟಗೆ ಎತ್ತಿ ಹಿಡಿಯುವ ಕುದುರೆಯು "ಬೋರಿಗೆ" ಎನಿಸಿಕೊಳ್ಳುವದು. ಅದನ್ನು ತೆಗೆದುಕೊಳ್ಳಲ್ಪಟ್ಟ ಯಜಮಾನನ ಕೈಯಲ್ಲಿ ಭಿಕ್ಕೀ ಪರಟಿಯನ್ನು ಕೊಡಿಸುವದು. ಬಾಲದ ಮೂಲದಲ್ಲಿ ಮದೋದಕ ಸೋರುತ್ತಿದ್ದರೆ ಅವು ದುಷ್ಟವು.

ಕುಂಡಿಯು ತಿಗದಮೇಲೆ ಸುಳಿ ಇದ್ದರೆ "ದಲಭಂಜನ"ವೆನಿಸುವದು. ಅಂಥಾದ್ದನ್ನು ಎಂದೂ ತೆಗೆದುಕೊಳ್ಳಲಾಗದು.

ಏಕರಂಗಿ ಕುದುರೆ ಇದ್ದು, ಕರೇ, ನೀಲಿ, ನಸುಗೆಂಪು, ಈ ಬಣ್ಣದ ಚಿಕ್ಕೆಗಳಿದ್ದ ಕುದುರೆಗೆ "ಅಂಜನಿ" ಎನ್ನುವರು. ಇಂಥಾ ಕುದುರೆಯಿಂದ ರಾಮನಿಗೆ ಹದಿನಾಲ್ಕುವರ್ಷ ವನವಾಸವುಂಟಾಯಿತು.

ಸರ್ವಾಂಗವು ಒಂದೇ ಬಣ್ಣವಿದ್ದು, ಎಡಗಡೆಯ ಪಕ್ಕದಲ್ಲಿ ಕೆಂಪು ಚಿಕ್ಕೆಯಿದ್ದರೆ "ರಕ್ತ ಅಂಜನಿ" ಎನಿಸುವದು. ಇದು ಬಹಳ ಕೆಟ್ಟದ್ದು.

ಸರ್ವಾಂಗವು ಒಂದೇ ಬಣ್ಣವಿದ್ದು, ಎದೆಯಮೇಲೆ ಕರೇ ಚಿಕ್ಕಿಗಳಿದ್ದರೆ ಅದು "ಕೃಷ್ಣಾಂಜನಿ" ಎಂದೆನ್ನಿಸಿಕೊಳ್ಳುವದು. ಇದು ಯಜಮಾನನನ್ನು ನಷ್ಟಪಡಿಸುವದು.

ಸರ್ವಾಂಗವು ಏಕರಂಗವಿದ್ದು ಮುಂಗಾಲ ಚಪ್ಪೆಯಲ್ಲಿ ಹಳದಿ ವರ್ಣದ ಚಿಕ್ಕೆಗಳಿದ್ದರೆ ಅದು "ಪೀತಾಂಜನ"ವೆನಿಸುವದು. ಇದಾದರೂ ಎಜಮಾನನಿಗೆ ನಷ್ಟ ಪಡಿಸುವದು.

ಸರ್ವಾಂಗ ಏಕರಂಗವಿದ್ದು ಬರಕಿಗೆ ಬಿಳೇ ಚಿಕ್ಕೆಗಳಿದ್ದರೆ "ಶ್ವೇತಾಂಜನ"ವೆನಿಸುವದು. ಅದನ್ನು ತೆಗೆದುಕೊಳ್ಳಬಾರದು.

ಈ ನಾಲ್ಕು ಅಂಜನ ಕುದುರೆಗಳನ್ನು ಬ್ರಮ್ಹದೇವರು ರಾವಣನಲ್ಲಿ ಕಳುಹಿಸಿದನು. ಅದನ್ನು ಅವನು ಇಟ್ಟುಕೊಂಡದ್ದರಿಂದ ನಿರ್ವಂಶನಾಗಿ ಹೋದನು.



## ಹೊಟ್ಟ್ರೇ ಕೆಳಗಿನ ಪರೀಕ್ಷಾ.

ಕುದುರೆಯ ಮೇಲೆ ಕೂತವನ ಕಾಲು ಕುದುರೆಯ ಶರೀರಕ್ಕೆ ತಾಗುವ ಸ್ಥಳದಲ್ಲಿ ಸುಳಿ ಇದ್ದರೆ ಅದು "ತಲಾವರ್ತ"ವೆನಿಸುವದು. ಅದು ದರಿದ್ರಕ್ಕೆ ಕಾರಣನಾಗ ಮಾಡುವದು.

ಹೊಟ್ಟೆಯ ಕೆಳಗೆ ಬೇರಬಂದಿನಿಂದ ಹಿಂದಕ್ಕೆ ಹರಿಹೋದದರ ಮಧ್ಯದಲ್ಲಿ ಸುಳಿ ಇದ್ದರೆ ಅದು "ಗೋಮ"ವೆನಿಸುವದು.

ಅದರ ಮುಖ ಮುಂದಕ್ಕೆ ಇದ್ದರೆ ತೆಗೆದುಕೊಂಡವನಿಗೆ ನಷ್ಟವು. ಹಿಂದಕ್ಕಿದ್ದರೆ ಮಾರುವವನಿಗೆ ನಷ್ಟವು. ಎಂದರಿಯುವದು.

ತಂಗದ ಹತ್ತರ ಸುಳಿ ಇದ್ದರೆ ಅದು "ಶಿಪಿಲಾ" ವೆನಿಸಿಕೊಳ್ಳುವದು. ಇದರಿಂದ ದೋಷವಿಲ್ಲವು. ಇದು ಸಾಧಾರಣವು.

ಹೊಟ್ಟೆಯ ಒಂದು ಮಗ್ಗಲಿಗೆ ಸುಳಿ ಇದ್ದರೆ ಅದು "ಉದಾರಾವರ್ತ" ವೆನಿಸುವದು. ಇದರಿಂದಲೂ ದೋಷವಿಲ್ಲವು. ಇದೂ ಸಾಧಾರಣವು.

ವೃಷಣದ ಹತ್ತರ ಪಕ್ಕಡಿಯಲ್ಲಿ ಸುಳಿ ಇದ್ದರೆ "ಅಂಡಾವರ್ತ" ವೆನಿಸುವದು. ಇದಕ್ಕಾದರೂ ದೋಷವಿಲ್ಲವು.

ಹೊಟ್ಟೆಯಕೆಳಗೆ ನರೋಲಿಯ ಆಕೃತಿಯ ಗಂಟು ಇದ್ದರೆ ಅವು "ಸ್ತನ" ಗಳೆನ್ನಿಸಿಕೊಳ್ಳುವವು. ಅಂಥಾದ್ದನ್ನು ತೆಗೆದುಕೊಳ್ಳಬಾರದು.

ಒಂದೇ ವೃಷಣದ ಕುದುರೆಗೆ "ಏಕಾಂಡ" ವೆನ್ನುವರು. ಅದನ್ನು ತೆಗೆದುಕೊಳ್ಳಬಾರದು.

ಸರ್ವಾಂಗ ಒಂದೇ ಬಣ್ಣ ವಿದ್ದು, ಕೊರಳಲ್ಲಿ ಬಿಳೇ ಚಿಕ್ಕೆಗಳಿದ್ದರೆ, "ಏಕರಂಗಿ" ಎನಿಸುವದು. ಅದು ಕೆಟ್ಟದೆ.

ಹೊಟ್ಟೆಯ ಕೆಳಗೆ ನದೀಯ ಪ್ರವಾಹದಂತೆ ಇದ್ದು ಅದರ ಮಧ್ಯಭಾಗದಲ್ಲಿ ದೊಡ್ಡ ಸುಳಿ ಇದ್ದರೆ ಅದು "ಗಂಗಾಪಾಟ" ವೆನಿಸಿಕೊಂಬುವದು. ಅದು ಉತ್ತಮವೆಂದರಿಯುವದು.

Digitized by ROJA MUTHIAH RESEARCH LIBRARY

ಕುದುರೆಯ ಕಾಲುಚಪ್ಪೆಯಲ್ಲಿ ಸುಳಿ ಇದ್ದರೆ ಅಶುಭವೆಂದ ರಿಯುವದು.

ಎರಡೂ ಮಗ್ಗಲಿಗೂ ರಖೀಪದ ಕೆಳಗೆ ಸುಳಿಗಳಿದ್ದರೆ ದೋಷವಿಲ್ಲ. ಸಾಧಾರಣವು.

ಮುಂಗಾಲುಚಪ್ಪೆಯಮೇಲೆ ಎರಡೂಮಗ್ಗಲಿಗೂ ಸುಳಿಗಳಿದ್ದರೆ " ಅಂಗಾವರ್ತ " ವೆನಿಸಿಕೊಂಬುವದು. ಅದರಂತೆ ತೊಡೆಗಳಿಗೂ ಇದ್ದರೆ ಅವುಗಳಿಗೆ " ಖಿಲಾವರ್ತ " ವೆನ್ನಬೇಕು. ಇದು ಸಾಧಾರಣವು ಅಂಗಾವರ್ತ ಮಾತ್ರ ಕೆಟ್ಟದು.

ಒಂದೇ ಮಗ್ಗಲಿಗೆ ಸುಳಿ ಇದ್ದರೆ " ಕಂಕುಳಾವರ್ತ " ವೆನಿಸಿಕೊಳ್ಳಲ್ಪಡುವದು. ಇದು ಬಹಳೇ ಕೆಟ್ಟದ್ದು. ಇದನ್ನು ತೆಗೆದುಕೊಳ್ಳಲಾಗದು.

ತೊಡೆಗೆ ಸುಳಿ ಇದ್ದರೆ " ಜಾನುವರ್ತ " ವೆನಿಸುವದು. ಇದಕ್ಕೆ ದೋಷವಿಲ್ಲಾ. ಇದೂ ಸಾಧಾರಣವು.

ಮುಂಗಾಲು ಮೊಣಕಾಲಿನಮೇಲೆ ಸುಳಿ ಇದ್ದ ಕುದುರೆಯು " ಅಭಾಗ್ಯ " ವೆಂದೆನಿಸುವದು. ಇದು ಇದ್ದ ಮನೆಯಲ್ಲಿ ಫಕ್ತ ತಾನೊಂದೇ ಉಳಿಯುವದು.

---

## ಪಾದ ಪರೀಕ್ಷೆ.

ನಾಲ್ಕು ಕಾಲುಗಳ ಪೈಕಿ ಒಂದು ಕಾಲಿಗೆ ಐದನೇ ಕಾಲಿನಂತೆ ಶಾಖೆ ಒಡೆದಿದ್ದರೆ ಅದನ್ನು ಕೊಳ್ಳಲಾಗದು. ಅದೂ ಕೆಟ್ಟದು.

ಸರ್ವಾಂಗವು ಏಕರಂಗವಿದ್ದು ಹಿಂಗಾಲಿನಮೇಲೆ ಬಿಳೀ ಚಿಕ್ಕೆ ಇದ್ದರೆ ಅದು " ಆರ್ಜಲ " ವೆನಿಸುವದು. ಅದನ್ನು ಎಂದೂ ತಕ್ಕೊಳ್ಳಬಾರದು.

---

## ದಂತ ಪರೀಕ್ಷಾ

ಐದು ಹಲ್ಲುಗಳಲ್ಲಿ ಎರಡು ಹಲ್ಲುಗಳು ಹಳದಿ ವರ್ಣವಾಗಿಯೂ ಮತ್ತು ಹತ್ತರದವು ಶುಭ್ರವರ್ಣದವಾಗಿಯೂ

Digitized by ROJA MUTHIAH RESEARCH LIBRARY



ಇದ್ದು ಮೇಲೆ ಅಕ್ಕಿಯ ಕಾಳುಗಳಂತೆ ಟಿಬಕಿಗಳಿದ್ದರೆ ಅದಕ್ಕೆ ಶುಕ್ಲದಂತ ಅನ್ನುತ್ತಾರೆ. ಇಂಥ ಹಲ್ಲುಗಳುಳ್ಳ ಕುದುರೆಯ ವಯಸ್ಸು ೧೪ ವರುಷವೆಂದು ಹೇಳಬಹುದು.

ಯಾವ ಕುದುರೆಯ ಮೂರನೆಯ ಹಲ್ಲಿನಮೇಲೆ ಕಚ್ಚು ವಿದ್ದು ನಾಲ್ಕನೆಯ ಹಲ್ಲಿನಮೇಲೆ ಸುರಂಗೀವರ್ಣ ಅಥವಾ ಹಳದೀ ವರ್ಣದಂತೆ ಟಿಬಕಿಗಳಿದ್ದರೆ ಅದಕ್ಕೆ ಪೀತಾಂಜನಿಯನ್ನುತ್ತಾರೆ. ಇಂಥ ಹಲ್ಲುಗಳುಳ್ಳ ಕುದುರೆಗಳು ೧೬ ವರುಷ ಬಾಳುತ್ತವೆ.

ಯಾವ ಕುದುರೆಯ ಮೊದಲನೆಯ ಹಲ್ಲಿಗೆ ಕಚ್ಚುವಿದ್ದು ಒಂದಕ್ಕೆ ನೀಲಿಯ ವರ್ಣದ ಟಿಬಕಿ ಇದ್ದರೆ ಅದಕ್ಕೆ "ನೀಲಾಂಜನಿ" ಎನ್ನುತ್ತಾರೆ. ಇಂಥ ಕುದುರೆಯು ೨೦ ವರ್ಷ ಬಾಳುವದು.

ಯಾವ ಕುದುರೆಯ ಮೊದಲನೆಯ ಹಲ್ಲಿನಮೇಲೆ ಶಂಖಾಕೃತಿ ಚಿನ್ಹವಿರುತ್ತದೆಯೊ ಆ ಕುದುರೆಯು ೨೩ ವರುಷ ಬಾಳುವದು.

ಯಾವ ಕುದುರೆಯ ಹಲ್ಲಿನಮೇಲೆ ಮೀನನಂತೆ ಚಿನ್ಹವಿದ್ದರೆ ಆ ಕುದುರೆಯು ೨೬ ವರುಷ ಬಾಳುವದು.

ಕುದುರೆಯ ಹಲ್ಲಿಗೆ ತೂತು ಬಿದ್ದು ಅದು ಮೂರು ವರುಷವಿದ್ದರೆ ಆ ಕುದುರೆಯು ೨೯ ವರುಷ ಬಾಳುವದು.

ಸಾಮಾನ್ಯವಾಗಿ ಕುದುರೆಗಳ ವಯಸ್ಸು ೩೨ ವರುಷವೆಂದು ಹೇಳಬಹುದು. ಆದರೆ ಇರಾಣದೇಶ ಆಫ್ರಿಕಾ ಖಂಡ ಇವುಗಳಲ್ಲಿಯ ಕುದುರೆಗಳು ಬಹು ಬಲವುಳ್ಳವು ಇರುತ್ತವೆ. ಇವು ೪೦ ವರುಷಗಳವರೆಗೂ ಬಾಳುತ್ತವೆ.

---

## ಚತ್ರುಜರ್ಾತಿ ಅಶ್ವ ಲಕ್ಷಣ.

ಪೂರ್ವ ದಿಕ್ಕಿನ ಕುದುರೆಯು ನಿರ್ಭಯದಿಂದ ಒಂದೆರಡು ವರ್ಷ ಬಾಳುವದು. ದಕ್ಷಿಣದಿಕ್ಕಿನ ಕುದುರೆಯು, ತ್ರಾಣಿ

ಯೂ, ತೇಜಃಪುಂಜವೂ ದಣಿಯದಂಥಾದ್ದು ಇರುತ್ತದೆ. ಅದಕ್ಕೆ ಹಾಲೂ, ಸಕ್ಕರಿ ಹಾಕಬೇಕು. ತಣ್ಣೀರು ಕುಡಿಸಬೇಕು. (೨೪) ವರ್ಷ ಬಾಳುವದು. ಪಶ್ಚಿಮ ದಿಕ್ಕಿನ ಕುದುರೆಯು, ಎತ್ತರವಾಗಿ ಪೂರ್ಣ ಆಹಾರಿ ಇದ್ದು, ಯುದ್ಧಕ್ಕೆ ಹಿಂದಾಗದಂಥದು. ಅದು (೨೮) ವರ್ಷ ಬಾಳುವದು. ಉತ್ತರ ದಿಕ್ಕಿನ ಕುದುರೆಯು, ನಿರೋಗಿಯೂ, ಸತ್ರಾಣಿಯೂ, ಸರ್ವಗುಣಸಂಪನ್ನವೂ ಇದ್ದು, ಕಲ್ಯಾಣಕರ ಉಂಟು ಮಾಡುವದು. ಇದು ೩೦ ವರ್ಷ ಬಾಳುವದು.

---

## ಸಂಗ್ರಾಮ ಸಿದ್ಧ ಲಕ್ಷಣ.

ಸಂಗ್ರಾಮಕ್ಕೆ ಸಿದ್ಧವಾಗುವಾಗ್ಯೆ ಕೆಂಪು ಥಡಿ ಹಾಕಬಾರದು. ಉಳಿದ ಬಣ್ಣದ್ದು ಹಾಕಿದರೆ ದೋಷವಿಲ್ಲ.

---

## ವರ್ಣ ಲಕ್ಷಣ.

ಯಾವ ಕುದುರೆಯ ಶರೀರ ವಾಸನೆಯು ಹಾಲಿನ ವಾಸನೆಯಂತಿದ್ದರೆ ಅದು ಬ್ರಾಹ್ಮಣ ಜಾತಿಯೆಂದು ತಿಳಿಯಬೇಕು. ಬಿಳಿಜೋಳದಂತೆ ವಾಸನೆ ಇದ್ದರೆ ಕ್ಷತ್ರಿಯ ಜಾತಿಯೆಂದು ತಿಳಿಯತಕ್ಕದ್ದು. ತುಪ್ಪದಂತೆ ವಾಸನೆ ಇದ್ದರೆ ವೈಶ್ಯಜಾತಿಯೆಂದು ತಿಳಿಯುವದು. ಮೀನದ ವಾಸನೆ ಬರುತ್ತಿದ್ದರೆ ಶೂದ್ರಜಾತಿಯೆಂದರಿಯುವದು.

---

## ಕುದುರೆಗಳಿಗೆ ಕೊಡುವ ಮಸಾಲೆ ಜೀನಸುಗಳು.

(೧) ಸುಂಠಿ, ಅಲ್ಲ, ಮೆಣಸು, ಇಂಗು, ದಾಲಚಿನ್ನಿ, ಲವಂಗ, ಗಾಂಜಿ, ಅರಿಷಿಣ, ಬೆಲ್ಲ ಇವುಗಳನ್ನು ಕೂಡಿಸಿ

11437

11437

SELECTIONS.

from

Hindu marriage law

ಹಿಂದೂ ವಿವಾಹಶಾಸ್ತ್ರಸಂಗ್ರಹ.

by

Alcondavalli. Sreeniwaschachar.

Printed at the Vidyatarangini Press

Mysore.

1893.

MUTHIAH RESEARCH LIBRARY